ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

ನೇ ವರ್ಷ 31ನೇ ಸಂಚಿಕೆ ಕೊಪ್ಪ 25-3-1990 ಭಾನುವಾರ ಬೆಲೆ 1-20 ಪೈಸೆ

ತೆಂಗಿನಮನೆ ಕ್ರೀಡಾಂಗಣ ನಿರ್ಮಿಸಿಕೊಟ್ಟವರಿಗೆ ಸಮಾಜ ಸಲ್ಲಿಸಿದ 'ನೆನಪಿನ ಕಾಣಿಕೆಗಳು':

"ಪುಂಡಾಟಿಕೆ ಮೊಕದ್ದಮೆ, ಜಾಮೀನು ರಹಿತ ವಾರಂಟ್ !

— ಸಿರಿಮನೆ ನಾಗರಾಜ್ —

ಕೊಪ್ಪ : 50 ಸಾವಿರ ರೂ. ಖರ್ಚು ಮಾಡಿ ಅವರು ನಿರ್ಮಿಸಿಕೊಟ್ಟ ಕ್ರೀಡಾಂಗಣದ ನಡುವೆ ಈಗ ರಸ್ತೆ ತೋಡಿದ್ದಾರೆ 'ದೇವರಂಥ ಮನುಷ್ಯ' ಎನ್ನಿಸಿಕೊಂಡಿದ್ದ ಅವರ ಸೋದರನ ಹೆಸರಿನಲ್ಲಿ ಸ್ಥಾಪಿಸಿದ್ದ ಉದ್ಘಾಟನಾ ಶಿಲಾ ಫಲಕಕ್ಕೆ ಡೈನಮೈಟ್ ಇಟ್ಟು ಸಿಡಿಸಿದ್ದಾರೆ—ಹಾಗಲ್ಲ, ಸದ್‌ಭಾವನೆಗಳ ಬುಡಕ್ಕೇ ಡೈನಮೈಟ್ ಇಟ್ಟಿದ್ದಾರೆ ಇದಕ್ಕೆಲ್ಲ ಕಳಶವಿಟ್ಟಂತೆ, ಈ 70ನೇ ಇಳಿ ವಯಸ್ಸಿನಲ್ಲಿ (ಹೀಗೆ ಕ್ರೀಡಾಂಗಣ ನಿರ್ಮಿಸಿಕೊಡುವ ಮೂಲಕ!?) "ಊರಿನಲ್ಲಿ ಅಶಾಂತಿ ಹಬ್ಬಿಸುತ್ತಿದ್ದಾರೆ" ಎಂಬ ಪೋಲೀಸ್ ವರದಿಯನ್ನು ರೂಪಿಸಿ ಅವರ ಹಾಗೂ ಅವರ ಇಬ್ಬರು ಮಕ್ಕಳ ಮೇಲೆ ಸೆಕ್ಷನ್ 107ರ ಪ್ರಕಾರ ಪುಂಡಾಟಿಕೆಯ ಮೊಕದ್ದಮೆ ಹೂಡಿ ಜಾಮೀನುರಹಿತ ವಾರಂಟ್ ಹೊರಡಿಸಿದ್ದಾರೆ

ಇವು ಕಳಸಾಪುರ ಎಸ್ಟೇಟಿನ ಮಾಲೀಕರಾದ ಜೆ.ಎಸ್. ಕುಲಾಸೊ ಅವರಿಗೆ ಸಮಾಜ ನೀಡಿರುವ "ನೆನಪಿನ ಕಾಣಿಕೆ"ಗಳು. ! ...ದು ಕೊಪ್ಪ ತಾ॥ ತೆಂಗಿನಮನೆಯ 'ದಿ॥ ಎ. ಜೆ. ಕುಲಾಸೊ ಸ್ಮಾರಕ ಸ್ಟಾರ್ ಕ್ರೀಡಾಂಗಣ'ದ ದುರಂತ ಕಥೆಯೂ ಹೌದು— ...ನ್ನಾದರೂ ಸಂಬಂಧಪಟ್ಟವರೆಲ್ಲ ಸೇರಿ ...ವನ್ನು ಸುಖಾಂತಗೊಳಿಸದಿದ್ದರೆ.

ಕೊಪ್ಪ-ಜಯಪುರ ನಡುವಿನ ತೆಂಗಿನಮನೆಯ ಸ್ಟಾರ್ ಕ್ರಿಕೆಟ್ ಕ್ಲಬ್ ಸದಸ್ಯ... ತಮ್ಮ ಆಟದ ಮೈದಾನವಾಗಿದ್ದ ಬೆಳವಾಡಿ ರಸ್ತೆಯ ಮಟ್ಟವಾದ ಭಾಗವನ್ನೆ ...ಮೈದಾನದಿಂದ ಕ್ರೀಡಾ ಮೈದಾನವಾಗಿ ...ಪರಿವರ್ತಿಸಿದ್ದು 'ರಾವಣನ ಹೊಟ್ಟೆಗೆ ...ಸಿನ ಮಜ್ಜಿಗೆ' ಎಂಬಂತಾದಾಗ, ಅವರ ...ಬ್ಬರಾದ ಕಳಸಾಪುರ ಎಸ್ಟೇಟಿನ ...ಲ್ ಕುಲಾಸೊ ತಮ್ಮ ಖರ್ಚಿನಲ್ಲೇ ಕ್ರೀಡಾಂಗಣ ನಿರ್ಮಿಸುವ ಯೋಚನೆ ಮಾ...ದರು. ಇದಕ್ಕೆ ಅವರ ತಂದೆ ಜೆ. ಎಸ್. ಕುಲಾಸೊ ಅವರ ಮಂಜೂರಾತಿಯೂ ...ರೆಯಿತು.

ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್ ...ಸಿಯಾಗಿ, ಕ್ರೀಡಾಂಗಣಕ್ಕೆ 2 ಎಕರೆ ...ಮಿ ಮಂಜೂರಾತಿಗೆ ಅರ್ಜಿ ಹಾಕಿ, ...-10-87ರಂದು ಮಂಡಲ ಪಂಚಾಯ್ತಿ ...ಅದನ್ನು ಅನುಮೋದಿಸಿ ನಿರ್ಣಯ ...ಡಿತು 40-45 ಸಾವಿರ ರೂ. ವೆಚ್ಚ... ಬೇಗನೆ ವಿಶಾಲವಾದ ಆಟದ ಮೈದಾ...ನ ನಿರ್ಮಾಣವೂ ಆಯಿತು.

...ದಕ್ಕೆ ದಾನಿಗಳಾದ ಜೆ.ಎಸ್. ಕುಲಾ...ಅವರದೇ ಹೆಸರಿಡಬೇಕೆಂಬ ಗ್ರಾಮ...ಸಲಹೆಗೆ ಅವರು ಖುಶರಾಂ ಒಪ್ಪದಿದ್ದಾಗ, ಊರಿಗುಪಕಾರಿಯಾಗಿ 'ದೇವರಂಥ ಮನುಷ್ಯ' ಎನ್ನಿಸಿಕೊಂಡಿದ್ದ ಅವರ ಸೋದರ ದಿ॥ ಎ. ಜೆ. ಕುಲಾಸೊ ಅವರ ಹೆಸರಿಡಲು ಜನತೆ ನಿರ್ಧರಿಸಿದರು.

ತಾ॥ 9 1.89ರಂದು ಶಾಸಕ ಗೋವಿಂದ ಗೌಡರಿಂದ ಕ್ರೀಡಾಂಗಣದ ಉದ್ಘಾಟನೆಯೂ ನಡೆಯಿತು ಅನಂತರ ಹಲವಾರು ಪಂದ್ಯಾಟಗಳೂ, ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲಾ ಮಟ್ಟದ ಆಹ್ವಾನಿತ ನಿಗದಿತ ಓವರ್ ಕ್ರಿಕೆಟ್ ಟೂರ್ನಿಯೂ ಇಲ್ಲಿ ಯಶಸ್ವಿಯಾಗಿ ನಡೆಯಿತು.

ತಕರಾರು

ಆದರೆ ಅದೇ ವೇಳೆಗೆ (ಸುಮಾರು ಕಳೆದ ವರ್ಷದ ಅಕ್ಟೋಬರ್-ನವೆಂಬರ್) ಈ ಕ್ರೀಡಾಂಗಣದ ವಿರುದ್ಧ ತಕರಾರೆದ್ದಿತು. "ಈ ಜಾಗದಲ್ಲಿ 1972ರಲ್ಲಿ 36 ಜನರಿಗೆ ನಿವೇಶನ ಮಂಜೂರಾಗಿದೆ " ಇದು ಒಂದು. "ಈ ಕ್ರೀಡಾಂಗಣ ಇದ್ದಲ್ಲಿ ಮೊದಲು ಇದ್ದ ಬೆಳವಾಡಿ ರಸ್ತೆ ನಕಾಶೆಯಲ್ಲಿ ಕಂಡ ರಸ್ತೆ. ಕ್ರೀಡಾಂಗಣದ ಪಕ್ಕದಲ್ಲಿ ಹೊಸದಾಗಿ ನಿರ್ಮಿಸಿಕೊಟ್ಟಿರುವ ರಸ್ತೆ ನಮಗೆ ಬೇಡ. ನಮಗೆ ಹಳೆಯ ರಸ್ತೆಯೇ ಬೇಕು." ಇದು ಇನ್ನೊಂದು.

ನಿವೇಶನ, ರಸ್ತೆ

1972ರಲ್ಲಿ ಬಹುಶಃ ಸುಮಾರಾಗಿ ಇದೇ ಜಾಗದಲ್ಲಿ 36 ಜನರಿಗೆ ನಿವೇಶನ ಹಂಚಲು ವ್ಯವಸ್ಥೆಯಾದರೂ ಸಹ, ಅಲ್ಲಿ ನೀರಿನ ಸೌಕರ್ಯ ಇಲ್ಲದ್ದರಿಂದ, ಯಾರೂ ಅಲ್ಲಿ ಮನೆ ಕಟ್ಟಲಿಲ್ಲ. ಅವರಲ್ಲಿ ಹೆಚ್ಚಿನವರು ರಸ್ತೆಯ ಪಕ್ಕದಲ್ಲಿ ಪುನಃ ನಿವೇಶನ-ಜನತಾ ಮನೆ ಮಂಜೂರು ಮಾಡಿಸಿಕೊಂಡು ಮನೆ ಕಟ್ಟಿಕೊಂಡಿದ್ದಾರೆ. ಎಷ್ಟೋ ಜನ ಊರೂ ಬಿಟ್ಟಿದ್ದಾರೆ. ಹಾಗೂ ಒಂದು ವೇಳೆ ಯಾರಿಗಾದರೂ ನಿವೇಶನ ಮಂಜೂರಾಗಬೇಕೆಂಬುದೇ ಪ್ರಶ್ನೆಯಾದರೆ, ಅದನ್ನು ಚಿಟಿಕೆ ಹೊಡೆದಷ್ಟು ಸಲೀಸಾಗಿ ಮಾಡಬಹುದು. ಅದಕ್ಕೆ ಈ ಜಾಗವೇ ಬೇಕೆಂದಿಲ್ಲ, ಈ ಎಲ್ಲ ಹಗರಣವೂ ಬೇಕಿಲ್ಲ—ಎನ್ನುತ್ತಾರೆ ಸಂಬಂಧಿಸಿದ ಅಧಿಕಾರಿ.

ಇನ್ನು ನಕಾಶೆಯಲ್ಲಿ ಕಂಡ ರಸ್ತೆಯ ಪ್ರಶ್ನೆ. ಈ ಕ್ರೀಡಾಂಗಣದಲ್ಲಿ ಆಟ ನಡೆಯದಿರುವ ಸಮಯದಲ್ಲಿ - ಇಡೀ ವರ್ಷ ಅದರ ಮೇಲೆ ಯಾರು, ಏನು ಬೇಕಾದರೂ ಓಡಾಡಬಹುದು. ಹೊಸದಾಗಿ ನಿರ್ಮಿಸಿರುವ ರಸ್ತೆಯೂ ಯಾವ ರೀತಿಯಲ್ಲೂ ಅನಾನುಕೂಲವಾಗಿಲ್ಲ. ಜಮೀನು, ರಸ್ತೆ ಇವೆಲ್ಲ 'ನಕಾಶೆಯಲ್ಲಿ ಕಂಡದ್ದು' ಎಂಬುದು ಪ್ರಮುಖವಾಗಿ ಹಕ್ಕಿನ ರಕ್ಷಣೆಗೆ ಮಾತ್ರ. ಅದರಲ್ಲಿ ಸಾರ್ವಜನಿಕರ ಅಥವಾ ಗ್ರಾಮಸ್ಥರ ಹಿತದೃಷ್ಟಿಯಿಂದ ಚಿಕ್ಕ ಪುಟ್ಟ ಹೊಂದಾಣಿಕೆ ಮಾಡಿಕೊಳ್ಳುವುದು ಅಸಾಧ್ಯವೇನಲ್ಲ. ನಕಾಶೆಯಲ್ಲಿ ಕಾಣದೇ ಇರುವ ಎಷ್ಟೋ ರಸ್ತೆಗಳನ್ನೂ, ಜಮೀನುಗಳನ್ನೂ ನಾವು ಇಷ್ಟೇ ಹಕ್ಕಿನಿಂದ ಬಳಸುತ್ತಿಲ್ಲವೇ?

ಹಗರಣಕ್ಕೆ ಕಾರಣಗಳು

ಅಂದ ಮೇಲೆ, ಈ ಹಗರಣಕ್ಕೆ ಬೇರೇನೂ ಕಾರಣವಲ್ಲ. ವೈಯಕ್ತಿಕ ದ್ವೇಷ, ಸಂಕುಚಿತ ಬುದ್ಧಿ, ಕೊಳಕು ರಾಜಕೀಯ ಹಾಗೂ ಜವಾಬ್ದಾರಿ ಸ್ಥಾನದಲ್ಲಿರುವವರ ಅದಕ್ಷತೆ ಮತ್ತು ಪರಾವಲಂಬನೆ—ಇವೇ ಕಾರಣ.

ಇವನ್ನೆಲ್ಲ ಯಾರ್ಯಾರ ಪಾಲು ಏನೇನೆಂದು ಬಿಡಿಸಿ ಹೇಳುವ ಅಗತ್ಯ 'ಮುಂಜಾವು'ಗೆ ಬಾರದಂತೆ ಎಲ್ಲರೂ ಸೇರಿ ಕ್ರೀಡಾಂಗಣದ ಅಸ್ತಿತ್ವಕ್ಕೆ ಯಾವ ವಿಕೃತಿಯೂ ಬಾರದಂತೆ ಚಂದಗಾಣಿಸುವುದು ಅಗತ್ಯ. ಇಲ್ಲವಾದರೆ, ಪಕ್ಷಭೇದ, ಜಾತಿ-ಮತ ಭೇದಗಳನ್ನೆಲ್ಲ ಮರೆತು ಒಂದು ಉತ್ತಮ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಲು ಸಜ್ಜಾಗುವ ಯುವ ಜನತೆಗೂ ಇದು ಒಂದು ಕೆಟ್ಟ 'ಪಾಠ'ವಾಗುವುದಲ್ಲದೆ, ಸಾರ್ವಜನಿಕ ಕೆಲಸಕ್ಕೆ ಹೀಗೆ ಹತ್ತಾರು ಸಾವಿರ ರೂ.ಗಳನ್ನು ಏಕ ಗಂಟಾಗಿ ದಾನ ಮಾಡುವವರೇ ವಿರಳವಾಗಿರುವಾಗ, ಇಂಥ ಕೊಡುಗೈಗಳು ಎಂದೆಂದೂ ಮುಂದೆ ಬರದಂತೆ ಹಿಂಜರಿಕೆ ಹುಟ್ಟಿಸುವ ಪ್ರಸಂಗವೂ ಆಗುತ್ತದೆ.

ಕಾದು ನೋಡಬೇಕು

ಕೊಪ್ಪ ಎ. ಇ. ಒ.ರಿಂದ ಹಣ ದುರುಪಯೋಗದ ಆರೋಪ

ಕೊಪ್ಪ : ಈ ತಾಲ್ಲೂಕಿನ 57 ಶಾಲೆಗಳಲ್ಲಿ ಶಾಲಾ ವನ ಬೆಳೆಸುವುದಕ್ಕಾಗಿ ಇಲ್ಲಿನ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದಿಂದ ತಲಾ 1600 ರೂಗಳಂತೆ ಮಂಜೂರಾಗಿದ್ದ ಒಟ್ಟು 91,200 ರೂ. ಹಣದ ದುರುಪಯೋಗ ನಡೆದಿದೆ ಎಂಬ ಗುಲ್ಲು ಎದ್ದಿದೆ

ಈ ಹಣ ಬಂದ ವಿಚಾರವನ್ನು ಎ. ಇ. ಒ. ಜಿಲ್ಲಾ ಪರಿಷತ್ತಿಗೆ ತಿಳಿಸಿರಲಿಲ್ಲವೆಂದೂ, ಇದರಲ್ಲಿ ಈಗಾಗಲೇ 24,000 ರೂ ಗಳನ್ನು ಡ್ರಾ ಮಾಡಲಾಗಿದ್ದು ಅದನ್ನು ನಿಜವಾಗಿ ಹಂಚದೆ ದುರುಪಯೋಗ ನಡೆದಿರುವುದಾಗಿ ಜಿ.ಪ. ಅಧ್ಯಕ್ಷರಿಗೆ ದೂರು ಬಂದಿರುವುದಾಗಿ ಇದೇ ಮಾ 21ರ ಜಿಲ್ಲಾ ಪತ್ರಿಕೆಗಳು ವರದಿ ಮಾಡಿದ್ದವು

ಈ ಬಗ್ಗೆ ಡಿ.ಡಿ.ಪಿ.ಐ ಅವರು ತುರ್ತು ತನಿಖೆ ನಡೆಸಿದ್ದು, ಹಣವನ್ನು ಕೂಡಲೇ ಎಲ್ಲಾ ಶಾಲೆಗಳಿಗೆ ವಿತರಿಸುವಂತೆ ಅವರು ಆದೇಶಿಸಿದ ಪ್ರಕಾರ ಎಲ್ಲಾ ಮುಖ್ಯೋಪಾಧ್ಯಾಯರುಗಳಿಗೆ ಚೆಕ್ ನೀಡಿ, ಮಾ. 28 ರೊಳಗೆ ಈ ಹಣವನ್ನು ಶಾಲಾ ವನದ ಬೇಲಿ ಹಾಗೂ ತೋಟಗಾರಿಕೆ ಉಪಕರಣಗಳಿಗೆ ಬಳಸಿ ಓಚರ್ ಸಲ್ಲಿಸಲು ತಿಳಿಸಲಾಗಿದೆ.

ಎ.ಇ.ಒ. ಸಮಜಾಯಿಷಿ

ಈ ಹಣ ಬಂದ ಸಮಯ (ನವೆಂಬರ್ 21) ಶಾಲಾವನಕ್ಕೆ ಗಿಡ ನೆಡಲು ಸೂಕ್ತವಲ್ಲ ಜೊತೆಗೆ ಈ ಹಣ ಒಂದು ಪರಿಪೂರ್ಣ ಶಾಲಾವನಕ್ಕೆ ಹೇಗೂ ಸಾಲುವುದಿಲ್ಲ. ಶಾಲಾಭಿವೃದ್ಧಿ ಸಮಿತಿಯವರ ಮನ ಒಲಿಸಿ ಅವರಿಂದಲೂ ಸ್ವಲ್ಪ ಹಣ ತೊಡಗಿಸಿಕೊಂಡರೆ ಒಳ್ಳೆಯದಾಗುತ್ತದೆ. ಹಾಗೂ, ಅದರಲ್ಲಿ ಒಂದು ನಾಲ್ಕೈದು ನೂರು ರೂ. ಉಳಿಸಿ ಅದನ್ನು ಶಿಕ್ಷಕರ ಭವನಕ್ಕೆ ಕೊಡಿಸಬಹುದು ಎಂಬುದೂ ಆಸೆ.

ಶಿಕ್ಷಕರ ಭವನದ ಸಮಿತಿ ಸಭೆಯಲ್ಲಿ ಶಾಸಕರು, ಗೋವಿಂದ ಗೌಡರು, ಪಿ. ಜೆ. ಗುರ್ಜರ್ ಎಲ್ಲ ಇದ್ದಾಗ ಈ ಹಣ ಬಂದ ವಿಷಯ ತಿಳಿಸಿ, ಅದರಲ್ಲಿ ತಾತ್ಕಾಲಿಕ್ಕೆ ಸ್ವಲ್ಪ ಹಣವನ್ನು ಶಿಕ್ಷಕರ ಭವನದ ಖಾತೆಗೆ ತೆಗೆದುಕೊಂಡು 'ಬ್ಯಾಂಕ್ ಬ್ಯಾಲೆನ್ಸ್ ಸರ್ಟಿಫಿಕೇಟ್' ಪಡೆದು, ಅದರ ಆಧಾರದ ಮೇಲೆ ಜಿಲ್ಲಾ ಪರಿಷತ್ತಿನಿಂದ ಹಣ ಬಿಡುಗಡೆಯಾದ ನಂತರ ಪುನಃ ಈ ಹಣವನ್ನು ಬುಕ್ ಅಡ್ಜಸ್ಟ್‌ಮೆಂಟ್ ಮಾಡುವುದಾಗಿ ಎಲ್ಲರಿಗೆ ತಿಳಿಸಿದ್ದೆ. ಅದೇ ರೀತಿ ಮಾಡಿದ್ದೇನೆ ಹೊರತು ದುರುಪಯೋಗ ಮಾಡಿಲ್ಲ. ಆ ಉದ್ದೇಶವೂ ಇರಲಿಲ್ಲ. ಒಂದೇ ಕಲ್ಲಿನಿಂದ ಎರಡು ಹಕ್ಕಿ ಹೊಡೆದಂತೆ ಎರಡೂ ಕೆಲಸ ಸಾಧಿಸಲು ಉದ್ದೇಶಿಸಿದ್ದೆ — ಎಂದು ಎ. ಇ. ಒ. ... ಸಮಜಾಯಿಷಿ ನೀಡುತ್ತಾರೆ.

(8ನೇ ಪುಟಕ್ಕೆ)

ಮನಿ ಸರ್ಕ್ಯುಲೇಶನ್: ಸುಲಭ ಹಣಕ್ಕೊಂದು ಹೊಸ 'ಟೋಪಿ ಧಂಧೆ'

ಶೃಂಗೇರಿ : ಈ ಹಿಂದೆ ಆದಿತ್ಯ ಫೈನಾನ್ಸ್, ಪಿಯರ್‌ಲೆಸ್ ಮುಂತಾದ ಹಣಕಾಸು ಸಂಸ್ಥೆಗಳ ಹೆಸರಲ್ಲಿ ಬಡಬಗ್ಗರಿಂದ ಹಿಡಿದು ಶ್ರೀಮಂತರವರೆಗೆ ಹಣ ವಸೂಲಿ ಮಾಡಿ ಹೊಟ್ಟೆ ತುಂಬಿಸಿಕೊಂಡವರೆಷ್ಟೋ. ಅವರಲ್ಲೇ ಕೆಲವರು ಮತ್ತು ಬೇರೆಯವರೂ ಸಹ ಈಚೆಗೆ ಹೊಸತೊಂದು 'ಸುಲಭ ಹಣ'ದ ಮಾರ್ಗ ಹುಡುಕಿದ್ದಾರೆ.

ಒಂದು ಸಾವಿರ ರೂ. ಕಟ್ಟಿ, 3 ಫಾರ್ಮ್ ಭರ್ತಿ ಮಾಡಿ 'ಸರ್ಕ್ಯುಲೇಟ್' ಮಾಡಬೇಕು. ಅದು ಹಾಗೇ ಮುಂದುವರಿದಂತೆ ನಿಮಗೆ ಸಾವಿರಗಟ್ಟಲೆ ಹಣ ಮನಿ ಯಾರ್ಡರ್ ಬರತೊಡಗುತ್ತದಂತೆ. ಒಟ್ಟು 84,500 ರೂ. ಬರುತ್ತದಂತೆ. ಯಾರ ಗಂಟು ಯಾರಿಗಿಲ್ಲ ಪುಗಸಟ್ಟೆ ಗಂಟು !?

ಈ ತಾಲ್ಲೂಕು ಮತ್ತು ಜಯಪುರ, ಅಗಳಗಂಡಿ ಪ್ರದೇಶಗಳಲ್ಲಿ ಈ ಟೋಪಿ ಧಂಧೆ ಬಹಳ ಬಿರುಸಿನಿಂದ ಚಾಲೂ ಆಗಿದೆಯೆಂದೂ, ಪುಗಸಟ್ಟೆ ಗಂಟಿನ ಆಸೆಗಲ್ಲವಾದರೆ ದಾಕ್ಷಿಣ್ಯಕ್ಕಾದರೂ 'ಬಸಿರು ಮಾಡುತ್ತಿದ್ದಾರೆಂದೂ ಜನ ತಿಳಿಸಿದ್ದಾರೆ.

ಈ ವರದಿ 18-3-90 ರ ಸಂಚಿಕೆಗೆಂದು ಸಿದ್ಧವಾದರೂ ಸ್ಥಳಾಭಾವದಿಂದ ಪ್ರಕಟವಾಗಲಿಲ್ಲ. ಈ ಮಧ್ಯೆ ತೀರ್ಥಹಳ್ಳಿಯ ಡಾ|| ಎಸ್. ಎಸ್. ಎಲ್. ಭಟ್ ಎಂಬ ಪಿಯರ್‌ಲೆಸ್ ಅಧಿಕಾರಿಯೊಬ್ಬರು ನಮ್ಮ ಪತ್ರಿಕಾಲಯಕ್ಕೆ ಬಂದು ಈ ಕೆಳಗಿನ ಬರಹ ಕೊಟ್ಟು ಹೋಗಿದ್ದಾರೆ:

ಪ್ರಿಯ ಸಂಪಾದಕರೆ,

ಹಣ ಚಲಾವಣೆ ಯೋಜನೆ ('ಮನಿ ಸರ್ಕ್ಯುಲೇಶನ್ ಸ್ಕೀಂ) ತಡೆ ಕಾಯ್ದೆ 1978ರ ಪ್ರಕಾರ ಹಣ ಪರಿಚಲನೆ (ಸರ್ಕ್ಯುಲೇಶನ್) ಕಾನೂನು ಬಾಹಿರವೆನ್ನಿಸಿದ್ದರೂ ಸಹ, ಮಲೆನಾಡು ಅಡಿಕೆ ಮಂಡಿಗಳಲ್ಲೂ ಹಾಗೂ ಇನ್ನಿತರ ಕಡೆಗಳಲ್ಲೂ ಹಲವಾರು ಹೆಸರಿನಿಂದ ಚಲಾವಣೆ ನಡೆಸುತ್ತಿದ್ದು, ಸಾರ್ವಜನಿಕರು ಇಂಥ ಮೋಸದ ವ್ಯವಹಾರಗಳಿಗೆ ಸದಸ್ಯರಾದಲ್ಲಿ ಸಾರ್ವಜನಿಕರು ಹಣ ಕಳೆದುಕೊಳ್ಳುವುದು ನಿಶ್ಚಿತ ಎಂದು ತಮ್ಮ ಪತ್ರಿಕೆಯ ಮೂಲಕ ಸಾರ್ವಜನಿಕರನ್ನು ಎಚ್ಚರಿಸಬಯಸುತ್ತೇನೆ.

ಹೀಗೆ ಹಣ ಸಂಗ್ರಹಿಸುತ್ತಿರುವ ಒಂದು ಸಂಸ್ಥೆಯ ಹೆಸರು ಹೀಗಿದೆ: Honest Commercial Links, ಚಿಕ್ಕಪೇಟೆ, ಬೆಂಗಳೂರು-53. ಇವರು ಮಂಡಿಗಳು ಮುಂತಾದವುಗಳ ಮೂಲಕ ಪ್ರತಿ ಸದಸ್ಯರಿಂದ 1100 ರೂ. ಸಂಗ್ರಹ ಮಾಡಿಸುತ್ತಿದ್ದಾರೆ. ಇದೇ ರೀತಿ 50 ರೂ. ಗಳಿಂದ ಹಿಡಿದು 5000 ರೂ. ವರೆಗಿನ ಸದಸ್ಯತ್ವಗಳಿವೆ.

ಸಾರ್ವಜನಿಕರು ಎಚ್ಚರ ವಹಿಸಲೆಂದು ಆಶಿಸುತ್ತೇನೆ. (ಸಹಿ)

ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗಾಗಿ ಜೀವ ಶಾಸ್ತ್ರದ ಲಘು ಪ್ರಶ್ನೋತ್ತರಗಳು

(ಮುಂದುವರಿಸಲಾಗಿದೆ.) ● ಕೆ. ಎಸ್. ರಾಮಕೃಷ್ಣ ಉಡುಪ

1 ಪ್ರ : ಅನುಚಲನಾ ಪ್ರತಿಕ್ರಿಯೆ ಎಂದರೇನು? ಅದನ್ನು ವ್ಯಕ್ತಪಡಿಸುವ ಎರಡು ಪ್ರಾಣಿಗಳನ್ನು ಹೆಸರಿಸಿ. 2

ಉ : ಪ್ರಚೋದನೆಯ ದಿಕ್ಕನ್ನು ಅವಲಂಬಿಸಿರುವ ಪ್ರಾಣಿಗಳ ಚಲನೆಯೇ ಅನುಚಲನಾ ಪ್ರತಿಕ್ರಿಯೆ. ಪ್ರಾಣಿಗಳು : ಜಿರಲೆ, ಪ್ಲಾನೇರಿಯ

2 ಫೆರೋಮೋನುಗಳೆಂದರೇನು ? ಅದರಿಂದುಂಟಾಗುವ ಪರಿಣಾಮವೇನು? $1\frac{1}{2}$

ಉ : ಸಾಮಾಜಿಕ ಸಂಪರ್ಕಕ್ಕಾಗಿ ಪ್ರಾಣಿಗಳು ಹೊರಸೂಸುವ ವಾಸನಾಯುಕ್ತ ರಾಸಾಯನಿಕ ವಸ್ತುವೆ ಫೆರೋಮೋನ್. ಇದು ಅದೇ ಜಾತಿಯ ಇತರ ಪ್ರಾಣಿಗಳ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ.

3 : ಜೇನು ನೊಣಗಳ ಎರಡು ವಿಧದ ಆಹಾರದ ನೃತ್ಯಗಳಾವುವು? 1

ಉ : ಅಸ್ಥಿರ ನೃತ್ಯ, ವೃತ್ತಾಕಾರದ ನೃತ್ಯ.

4 ಸರ್ಕಸ್ಸಿನಲ್ಲಿ ಪ್ರಾಣಿಗಳಿಂದ ಚಮತ್ಕಾರ ನಡೆಸುವಾಗ ಪ್ರತಿ ಸಲವೂ ಅವುಗಳಿಗೆ ಆಹಾರ ಕೊಡಲು ಕಾರಣವೇನು ? 1

ಉ : ಕಲಿತ ಚಮತ್ಕಾರಗಳನ್ನು ಅವುಗಳು ಮರೆಯುವುದಿಲ್ಲ.

5 ಕೆಲವು ಪಕ್ಷಿಗಳು ಗೂಡು ಕಟ್ಟಲು ಕಾರಣವೇನು? ಅದು ಅವುಗಳ ಯಾವ ನಡವಳಿಕೆಯನ್ನು ವ್ಯಕ್ತಪಡಿಸುತ್ತದೆ? 1

ಉ : ಸಂತಾನ ರಕ್ಷಣೆಗಾಗಿ. ಇದು ಪೋಷಕ ನಡವಳಿಕೆ.

6 ಜನಸಂಖ್ಯಾ ಸ್ಫೋಟ ಎಂದರೇನು? 1

ಉ : ತೀವ್ರಗತಿಯಲ್ಲಿ ಅಧಿಕ ಹೆಚ್ಚಳವಾದ ಜನಸಂಖ್ಯೆಯ ಪ್ರಮಾಣಕ್ಕೆ ಜನಸಂಖ್ಯಾ ಸ್ಫೋಟ ಎಂದು ಹೆಸರು.

7 ಜೈವಿಕ ನಿಯಂತ್ರಣ ಎಂದರೇನು? 1

ಉ : ಒಂದು ಜೀವಿಯಿಂದ ಮತ್ತೊಂದು ಜೀವಿಯ ಬೆಳವಣಿಗೆಯನ್ನು ಹತೋಟಿಯಲ್ಲಿಡುವುದಕ್ಕೆ ಜೈವಿಕ ನಿಯಂತ್ರಣ ಎಂದು ಹೆಸರು.

8 ಪ್ರಾಣಿ ಭಕ್ಷಕಗಳೆಂದರೇನು? ಎರಡು ಉದಾಹರಣೆ ಕೊಡಿ. 2

ಉ : ಇತರೆ ಪ್ರಾಣಿಗಳನ್ನು ತಿಂದು ಬದುಕುವ ಪ್ರಾಣಿಗಳೆ ಪ್ರಾಣಿ ಭಕ್ಷಕಗಳು. ಉದಾ : ಮುಂಗುಸಿ, ಗಿಡುಗ.

9 ಇವುಗಳನ್ನು ಹೆಸರಿಸಿ : 3

ಎ) ಅತ್ಯಂತ ದೂರಕ್ಕೆ ವಲಸೆ ಹೋಗುವ ಪಕ್ಷಿ.

ಬಿ) ಭಾರತದಲ್ಲಿ ಪಾಪಸ್‌ಕಳ್ಳಿಯ ನಿಯಂತ್ರಣಕ್ಕೆ ಬಳಸಿದ ಕೀಟ.

ಸಿ) ಜನ ಸಂಖ್ಯೆಯನ್ನು ಅಧ್ಯಯನ ಮಾಡುವ ವ್ಯಕ್ತಿ

ಡಿ) ಬ್ರೆಸಿಲ್ ತೀರದ ಕಡಲಾಮೆಗಳು ವಲಸೆ ಹೋಗುವ ದ್ವೀಪ.

ಇ) ಅಪೇಕ್ಷಿತ ಬೆಳೆಗಳ ನಡುವೆ ಬೆಳೆದ ಇತರ ಸಸ್ಯಗಳು.

ಎಫ್) ವ್ಯವಸ್ಥಿತ ಪ್ರತಿಕ್ರಿಯೆಯ ಬಗ್ಗೆ ಪ್ರಯೋಗ ಮಾಡಿದ ವಿಜ್ಞಾನಿ.

ಉ : ಎ) ಆರ್ಕ್‌ಟಿಕ್ ಟರ್ನ್

ಬಿ) ಕೊಕೀನಿಯಲ್ ಕೀಟ

ಸಿ) ಡೆಮೋಗ್ರಾಫರ್

ಡಿ) ಅಸೆನ್ಷನ್

ಇ) ಕಳೆ

ಎಫ್) ಐವನ್ ಪವ್ಲಾವ್ [IVAN PAVLOV]

ಲಘು ಮತ್ತು ಹೊಸ ಮಾದರಿ ಪ್ರಶ್ನೋತ್ತರಗಳು

1 ಪ್ರ : ಇವುಗಳಿಗೆ ವೈಜ್ಞಾನಿಕ ಕಾರಣ ತಿಳಿಸಿ : 1×3

ಎ) ಕೊಳೆತಿನಿಗಳು ಆಹಾರ ತಯಾರಿಸಲಾರವು

ಬಿ) ಎರೆ ಹುಳು ಒಂದು ವಲಯವಂತ ಪ್ರಾಣಿ

ಸಿ) ನೀಲಿ ಹಸಿರು ಪಾಚಿಗಳೆಲ್ಲ ಪ್ರೊಕ್ಯಾರಿಯೋಟಗಳು.

ಉ : ಎ) ಅವುಗಳಲ್ಲಿ ಪತ್ರಹರಿತ್ತುಗಳಿರುವುದಿಲ್ಲ. ಬಿ) ಅವುಗಳ ಶರೀರ ಸಿಲಿಂಡರಾಕಾರವಾಗಿದ್ದು ಅನೇಕ ವಲಯಗಳಿಂದೊಡಗೂಡಿದೆ. ಸಿ) ಅವುಗಳ ಜೀವಕೋಶಗಳಲ್ಲಿ ಸ್ಪಷ್ಟವಾದ ಕೋಶಕೇಂದ್ರಗಳಿಲ್ಲ.

2 ಇವುಗಳ ಒಂದೊಂದು ವ್ಯತ್ಯಾಸವನ್ನು ತಿಳಿಸಿ : $\frac{1}{2} \times 5$

ಎ) ಉಷ್ಣ ರಕ್ತ ಪ್ರಾಣಿಗಳು ಮತ್ತು ಶೀತ ರಕ್ತ ಪ್ರಾಣಿಗಳು

ಬಿ) ಸಸ್ಯ ಜೀವ ಕೋಶ ಮತ್ತು ಪ್ರಾಣಿ ಜೀವ ಕೋಶ

ಸಿ) ಸರಳ ಅಸ್ಥಿಭಂಗ ಮತ್ತು ಸಂಯುಕ್ತ ಅಸ್ಥಿಭಂಗ

ಡಿ) ದ್ವಿದಳ ಸಸ್ಯದ ಎಲೆ ಮತ್ತು ಏಕದಳ ಸಸ್ಯದ ಎಲೆ

ಇ) ಕೆಂಪು ರಕ್ತಕಣ ಮತ್ತು ಬಿಳಿ ರಕ್ತ ಕಣ.

ಉ : ಎ) ಉಷ್ಣ ರಕ್ತ ಪ್ರಾಣಿಯ ಶರೀರದ ಉಷ್ಣತೆ ವರ್ಷದ ಎಲ್ಲಾ ಕಾಲಗಳಲ್ಲಿ ಒಂದೇ ಸಮನಾಗಿರುತ್ತದೆ; ಶೀತ ರಕ್ತ ಪ್ರಾಣಿಗಳ ಶರೀರದ ಉಷ್ಣತೆ ವಾತಾವರಣದ ಉಷ್ಣತೆಯಷ್ಟೇ ಇರುತ್ತದೆ.

ಬಿ) ಸಸ್ಯ ಜೀವಕೋಶದಲ್ಲಿ ಸೆಲ್ಯುಲೋಸ್ ಎಂಬ ವಸ್ತು ಇದೆ. ಪ್ರಾಣಿ ಜೀವ ಕೋಶದಲ್ಲಿ ಸೆಲ್ಯುಲೋಸ್ ಎಂಬ ವಸ್ತು ಇಲ್ಲ.

ಸಿ) ಸರಳ ಅಸ್ಥಿ ಭಂಗ : ಮೂಳೆ ಮುರಿದ ತುದಿ ಚರ್ಮವನ್ನು ಹರಿದುಕೊಂಡು ಹೊರಗಡೆಗೆ ಬಂದಿರುವುದಿಲ್ಲ. ಸಂಯುಕ್ತ ಅಸ್ಥಿಭಂಗ : ಮೂಳೆ ಮುರಿದ ತುದಿ ಚರ್ಮವನ್ನು ಹರಿದುಕೊಂಡು ಹೊರಗಡೆ ಬಂದಿರುತ್ತದೆ.

ಡಿ) ದ್ವಿದಳ ಸಸ್ಯದ ಎಲೆ : ನಾಳಗಳು (ನಾರು) ಬಲೆಯಾಕಾರದಲ್ಲಿ ಹರಡಿರುತ್ತವೆ. ಏಕದಳ ಸಸ್ಯದ ಎಲೆ : ನಾಳಗಳು ಸಮನಾಂತರವಾಗಿ ಹರಡಿರುತ್ತವೆ.

ಇ) ಕೆಂಪು ರಕ್ತ ಕಣಗಳಲ್ಲಿ ಹೀಮೊಗ್ಲೋಬಿನ್ ಎಂಬ ವಸ್ತು ಇರುತ್ತದೆ ಬಿಳಿ ರಕ್ತ ಕಣಗಳಲ್ಲಿ ಹೀಮೋಗ್ಲೋಬಿನ್ ಎಂಬ ವಸ್ತು ಇರುವುದಿಲ್ಲ.

3 ಇವುಗಳನ್ನು ಹೆಸರಿಸಿ : $\frac{1}{2} \times 5$

ಎ) ಬೇರಿನ ವ್ಯೂಹವಾಗಿ ಬೆಳೆಯುವ ಬೀಜ ಭ್ರೂಣದ ಭಾಗ

ಬಿ) ಜೀವಕೋಶದ ಶಕ್ತಿ ಉತ್ಪಾದನಾ ಕೇಂದ್ರ ಸಿ) ಅತ್ಯಂತ ಪುರಾತನ ಶಿಲೆ ಡಿ) ದ್ಯುತಿ ಸಂಶ್ಲೇಷಣೆ ಜರುಗಿಸುವ ಆರ್ಗನೆಲ್

ಇ) ಹೊರ ಧರ್ಮ ಮತ್ತು ಒಳ ಧರ್ಮದ ನಡುವೆ ಇರುವ ಜೆಲ್ಲಿ ಮಾದರಿ ವಸ್ತು

ಉ : ಎ) ಭ್ರೂಣ ಮೂಲ ಬಿ) ಮೈಟೊಕಾಂಡ್ರಿಯ ಸಿ) ಅಗ್ನಿ ಶಿಲೆ ಡಿ) ಪತ್ರಹರಿತ್ತು ಇ) ಮಿಸೋಗ್ಲಿಯಾ

4 ಇವುಗಳ ವಂಶವನ್ನು ತಿಳಿಸಿ : $\frac{1}{2} \times 5$

ಎ) ಬಸವನ ಹುಳು ಬಿ) ನಕ್ಷತ್ರ ಮೀನು ಸಿ) ಹೈಡ್ರ ಡಿ) ಏಡಿ ಇ) ಜಿಗಣೆ.

ಉ : ಎ) ಮೃದ್ವಂಗಿಗಳ ವಂಶ ಬಿ) ಕಂಟಕಚರ್ಮಿಗಳ ವಂಶ ಸಿ) ಕುಟುಕು ಕಣವಂತ ವಂಶ. ಡಿ) ಸಂಧಿಪದಿಗಳ ವಂಶ ಇ) ವಲಯವಂತ ವಂಶ.

5 ಸೂಕ್ತ ಪದಗಳಿಂದ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ. $\frac{1}{2} \times$

ಎ) ಮನುಷ್ಯನ ದ್ವಿನಾಮ ನಾಮಕರಣವು—

ಬಿ) ಮೀನುಗಳ ಸಂಚಲನಾಂಗವು—

ಸಿ) —ಎಂಬುದು ಮೊಟ್ಟೆ ಇಡುವ ಸಸ್ತನಿ

ಡಿ) ಪರಾವಲಂಬಿ ಸಸ್ಯದ ಬೇರಿನ ಹೆಸರು—

ಇ) —ವು ದ್ರವ ಅಂಗಾಂಶ.

ಉ : ಎ) ಹೋಮೋಸೆಪಿಯನ್ಸ್ ಬಿ) ಈಜು ರೆಕ್ಕೆ ಸಿ) ಪ್ಲೇಟಿಪಸ್ ಡಿ) ಹಾಸ್ಟೋರಿಯ ಸಿ) ರಕ್ತ

(ಮುಗಿಯಿತು)

ಪ್ರೇಮಕ್ಕೂ ತೆರಿಗಿ ! ?

ಿ, ನನ್ ನಿನ್ನಂಥ
ರಾರ್ ಮಂದಿ, ಕದ್ದು
ಚ್ಚಿ ಮಾಡೋ ಪ್ರೇಮಕ್ಕ,
ರ್ ಮುಂಗಡ ಪತ್ರ
ವಾಣ ಹಾಕೇತಲ್ಲೇ.
ಂಗಂದ್ರ ....
ಕೂ ತಿಳೀವೊಲ್ದೇನು ನಿಂಗ?
ರ್ಷದಾಗ ಯಾರಾರ ಲೌವ್–
ರ್ ಬರೀತಾರೇನ್ ಹೇಳ್ ಮತ್ತ,
ಕ್ಕ ಇನ್‌ಲ್ಯಾಂಡ್ ಪತ್ರಕ್ಕೂ,
ರ್‌ಗೂ ತೆರಿಗಿ ಜಾಸ್ತಿ ಮಾಡ್ಯಾರ.
ರ್ ಸರ್ಕಾರ ಭಯೋತ್ಪಾದನಾ ದಮನ
ಬಿಟ್ ಈ ಪ್ರೇಮೋತ್ಪಾದನಾ
ನ ಮಾಡ್ಲಿಕ್ಹತ್ತೇತಿ ನೋಡ್ ಮತ್ತ,
ಂತಿ ನೀ ಇದಕ್ಕ...?
ಪ್ಪಲ್ಲ, ನಿಂಗ ತಿಳೀವೊಲ್ದು

ಮುಂಗಡ ಪತ್ರಕ್ಕೆ ನಾಲ್ಕು ಚುಟುಕಗಳು

ಇದೂ ಪ್ರಗತಿಪರ ಯೋಜನಾ ಅದ"
"ಹೆಂಗಪಾ, ನಂಗ್ ತಿಳೀವೊಲ್ದಲ್ಲ?"
"ಮುಂದಿನ್ ಯುವಕ ಭಯೋತ್ಪಾದಕರಿಗ
ಈಗ್ಲೇ ಕಡಿವಾಣ ಹಾಕ್ಲಿಕ್ ಹತ್ಯಾರ
ತಪ್ಪೇನದ?"

ಮಕ್ಕೀಗೂ ತೆರಿಗಿ ! ?

ಈ ವರ್ಷೇನು ತ್ರಾಸಾಗಾಂಗಿಲ್ಲ ನೋಡ್
ನಿನಗ, ನನ್ನ ಎಷ್ಟ ಪ್ರೀತಿ
ಮಾಡ್ಬೇಕನ್ನಿಸ್ತದ
ಅಷ್ಟೂ ಈ ವರ್ಷನೇ ಮಾಡ್ಬಿಡು !
ಎಷ್ಟ ಮುತ್ತ ಕೊಡಬೇಕೆನಿಸ್ತದ
ಅನದ್ನ ಈ ವರ್ಷನೇ ಕೊಟ್ಬಿಡ್ ಮತ್ತ!
ಎಷ್ಟ ಮಕ್ಳ ಹೆರಬೇಕೆನಿಸ್ತದ,
ಅಷ್ಟೂ ಇದೇ ವರ್ಷ ಹೆತ್ಬಿಡ.! ತಿಳೀತಿಲ್ಲೊ?

ಯಾರಿಗ್ಗೊತ್ತ
ಮುಂದಿನ ವರ್ಷ ಮುಂಗಡ ಪತ್ರದಾಗ
ಇವುಕ್ಕೂ ಎಲ್ಲ ತೆರಿಗಿ ಹಾಕ್ಬಿಟ್ಟ್ಯಾರು ಮತ್ತ
ಹೌದಲ್ಲೊ ? !


ಕುಟುಂಬ ನಿಯಂತ್ರಣ

"ಯಾಕಲೇ, ಈ ಸಾರಿ ಸರ್ಕಾರ
ಕುಟುಂಬ ನಿಯಂತ್ರಣಕ್ಕ ಹೆಚ್ಚಿನ
ಲಕ್ಷಗೊಟ್ಟಂಗ ಕಾಣವೊಲ್ದಲ್ಲೋ ?"
"ಯಾಕ್ ಕಾಣವೊಲ್ದು? ಸ್ವಲ್ಪ ತೆರಿ
ಛಲೋ ಕೆಲ್ಸ ಕೊಡು ಮತ್ತ,
pesticide (ಕೀಟ ನಾಶಕ) ದ ಮ್ಯಾಲ
ಯಾಕ್ ತೆರಿಗಿ ಕಡಿತ ಮಾಡ್ಯಾರ?
ಅದಷ್ಟ ಜನ ತಗಂಡ್ರ (ಹೊಟ್ಟೀವೊಳಗ)
ಕುಟುಂಬ ನಿಯಂತ್ರಣ ಆಗಂಗಿಲ್ಲ
ಅಂತೀಯೇನಪ್ಪ !!"

ಸಾಯೋ ತೆರಿಗಿ ಕೊಟ್ಟು ಸಾಯುಂದ್ರ ! ?

"ಲೇ ಯಾಕ್ಲ ತಲಿಗಿಲಿ ಕೆಟ್ಟೈತೇನ್ಲ ನಿನಗ
ಎರಡೂ ಮುಂಗಡ ಪತ್ರ ನೋಡನಾ
ಆದದ್ದೇ ತಡ ಸಾಯೂಕಂತ ಹೊಂಟೀ
ಯಲ್ಲೋ ?"
"ಇನ್ನೇನ್ ಮಾಡ್ಲಪ, ಕೇಂದ್ರ ಸರ್ಕಾರ
ಹೆಂಗೂ ನೌಕರಿ ಗ್ಯಾರಂಟಿ ಕೊಡಂಗಿಲ್ಲ,
ಜೀವದಿಂದಿದ್ರ ನೌಕ್ರಿ ಇಲ್ದ
ಈ ಪಾಟಿ ಎರೋ ತೆರಿಗಿ ಕಟ್ಕೋದ್ಹೆಂಗ ?
ಅದಕ್ಕ ಸತ್ತಾದ್ರು ತೆರಿಗಿ ಕಾಟದಿಂದ
ಪಾರಾಗಕ್ಕಂತ ಹೊಂಟೀನಪ್ಪ.
ಮತ್ತ ಮುಂದಿನ ವರ್ಷ
(ಸಾಯೋ) ತೆರಿಗಿ ಕೊಟ್ಟ್ಕ ಸಾಯುಂದ್ರ!?

ಟಿ. ಎಲ್. ಉಮೇಶ್,
ತೆಕ್ಕೂರು.



ಕನ್ನಡಿಗ ಬಾಲಕನ ಗಿನ್ನೆಸ್ ಸಾಧನೆ

ಪ್ರಪಂಚದ ಅತಿ ದೊಡ್ಡದಾದ, ವಿಶಿಷ್ಟ
ದ, ಶ್ರೇಷ್ಠವಾದ ಸಂಗತಿ–ಸಾಧನೆ–
ನೇಶಗಳೆಲ್ಲವನ್ನೂ 'ಗಿನ್ನೆಸ್ ಪುಸ್ತಕ'
ಬುದರಲ್ಲಿ ದಾಖಲೆ ಮಾಡುತ್ತಾರೆ
ಮ್ಮ ತಮ್ಮ ಸಾಧನೆ – ಸಾಹಸಗಳಿಗಾಗಿ
ಸ್ ಪುಸ್ತಕದಲ್ಲಿ ಹೆಸರು ದಾಖಲೆ
ಗುವಂತೆ ಮಾಡಲು ಪ್ರಪಂಚದ ಎಲ್ಲ
ಸಾವಿರಾರು ಮಂದಿ ಪ್ರತಿ ದಿನವೂ
ನಾ ರೀತಿಯ ಸಾಹಸಗಳನ್ನು ಮಾಡು
ಲೇ ಇರುತ್ತಾರೆ.
ಪ್ರಪಂಚದ ಅತಿ ಎತ್ತರದ ಶಿಖರ, ಅತಿ
ದ್ದದ ನದಿ, ಅತಿ ವಿಸ್ತಾರದ ಮರು
ಮಿ, ಆಳದ ಸಮುದ್ರ, ಅತಿ ಉದ್ದದ
ಗುರು, ಗಡ್ಡ, ತಲೆ ಕೂದಲು, ಅತಿ
ಗದ ಓಟ, ಜಿಗಿತ, ರನ್ ದಾಖಲೆ,
ಹೆಚ್ಚು ವಯಸ್ಸು, ಒಂದೇ ಬಾರಿಗೆ
ಹೆಚ್ಚು ದೋಸೆಯೋ ಬಾಳೆಹಣ್ಣೋ
ದ್ದು, ಅತಿ ಕಿರಿಯ ವಯಸ್ಸಿನ ಯಾವು
ಒಂದು ಸಾಧನೆ–ಹೀಗೆ ಈ ಗಿನ್ನೆಸ್
ಖಲೆಗಳಲ್ಲಿ ಏನುಂಟು–ಏನಿಲ್ಲ!
ಕರ್ನಾಟಕದ ಹಾಗೂ ಭಾರತದ
ಷ್ಟೇ ಮಂದಿ ಕೂಡ ಈ ಗಿನ್ನೆಸ್
ಖಲೆಗಳಲ್ಲಿ **ತಮ್ಮ** ಹೆಸರು ಮಾಡಿ
ಟ್ಟಿ. ಅಂಥವರಲ್ಲಿ ಒಬ್ಬ ಉಡುಪಿಯ
ನಿಯರ್ ಶಂಕರ್.
ಈತ ಕೇವಲ 6 ನೇ ತರಗತಿಯ
ದ್ಯಾರ್ಥಿ ಆದರೆ 'ವಿಶ್ವದ ಅತಿ ಕಿರಿಯ
ಯಸ್ಸಿನ ಯಕ್ಷಿಣಿಗಾರ' ಎಂಬುದಾಗಿ
ನ್ನೆಸ್ ಪುಸ್ತಕದಲ್ಲಿ ಇವನ ಹೆಸರು
ಖಲಾಗಿದೆ
ಈತನ ತಂದೆ ಪ್ರೊ!! ಶಂಕರ್ ಈಗಾಗ
ವಿಶ್ವಖ್ಯಾತಿಯ ಯಕ್ಷಿಣಿಗಾರರು.
ತೆಗೆ ಮೂಡಿಗೆರೆಯಲ್ಲಿ ಈ ಬಾಲಕ
ಕ್ಷಿಣಿ ಪ್ರದರ್ಶನ ನೀಡಿ, ಪ್ರೇಕ್ಷಕರ
ನ ಸೂರೆಗೊಂಡ.

ಸೋಮಾರಿ ಕಾಗೆ

ಒಂದೂರಿನಲ್ಲಿ ಒಂದು ಗುಬ್ಬಿ ಮತ್ತು ಕಾಗೆ ತುಂಬಾ ಸ್ನೇಹಿತರಾಗಿದ್ದವು ಕಾಗೆ ತುಂಬಾ ಸೋಮಾರಿಯಾಗಿತ್ತು ಅದು ಆಹಾರವನ್ನು ತರುತ್ತಿರಲಿಲ್ಲ. ಗೂಡು ಕಟ್ಟಿಕೊಳ್ಳುತ್ತಿರಲಿಲ್ಲ. ಗುಬ್ಬಿ ತಂದ ಆಹಾರವನ್ನು ತಿಂದು ಗುಬ್ಬಿಯ ಗೂಡಿನಲ್ಲೇ ಮಲಗಿಕೊಂಡಿರುತ್ತಿತ್ತು.

ಹೀಗೆ ಅನೇಕ ದಿನಗಳು ಕಳೆದವು. ಒಂದು ದಿನ ಗುಬ್ಬಿಗೆ ಕಾಗೆಯ ಸೋಮಾರಿತನವನ್ನು ಹೋಗಲಾಡಿಸಿ ಅದನ್ನು ಒಳ್ಳೆಯ ದಾರಿಗೆ ತರಬೇಕು ಎಂದು ತೋರಿತು. ಆಗ ಅದಕ್ಕೂ ಒಳ್ಳೆಯದಾಗುತ್ತದೆ. ನನಗೂ ಅದರ ಸೇವೆ ತಪ್ಪಿ, ನನಗೂ ಒಳ್ಳೆಯದಾಗುತ್ತದೆ ಎಂದು ಭಾವಿಸಿ ಅದು ಒಂದು ಉಪಾಯವನ್ನು ಮಾಡಿತು.

ಗುಬ್ಬಿ ಆ ದಿನ ಆರೋಗ್ಯ ಸರಿಯಿಲ್ಲದಿರುವವರಂತೆ ನಟಿಸಿ "ಕಾಗಕ್ಕ, ನನಗೆ ಇವತ್ತು ಹುಷಾರಿಲ್ಲ. ನೀನು ಆಹಾರವನ್ನು ತೆಗೆದುಕೊಂಡು ಬಾ" ಎಂದಿತು. ಕಾಗೆ "ನನಗೆ ಆಗುವುದಿಲ್ಲ. ನಿನ್ನ ಮಕ್ಕಳಿಲ್ಲವೆ ? ಅವುಗಳ ಹತ್ತಿರ ತರಿಸು" ಎಂದಿತು.

"ನನ್ನ ಮರಿಗಳು ಚಿಕ್ಕವು. ಅವುಗಳಿಗೆ ಹಾರಲಿಕ್ಕೇ ಬರುವುದಿಲ್ಲ" ಎಂದಿತು ಗುಬ್ಬಿ. ಆದರೆ ಕಾಗೆ "ನಾನಂತೂ ತರುವುದಿಲ್ಲ" ಎಂದಿತು. ಗುಬ್ಬಿ, "ನೀನು ತರದಿದ್ದರೆ ನಿನಗೇ ಇಲ್ಲ. ನಾನಂತೂ ನಿನ್ನೆ ತಂದಿದ್ದೇ ಸ್ವಲ್ಪ ಇತ್ತು. ಅದನ್ನೇ ತಿನ್ನುತ್ತೇನೆ" ಎಂದಿತು ಕಾಗೆ, "ನಿನ್ನ ಆಹಾರ ನೀನೇ ತಿನ್ನು. ನನಗೇನೂ ಬೇಡ" ಎಂದು ಹೇಳಿ ಮಲಗಿಕೊಂಡಿತು.

ಗುಬ್ಬಿಗೆ ತಾನು ಮಾಡಿದ ಉಪಾಯ ನಡೆಯಲಿಲ್ಲವಲ್ಲ, ಏನುಮಾಡಲಿ ? ಎಂದು ಚಿಂತೆಯಾಯಿತು. ಆಗ ಅದಕ್ಕೆ ಮತ್ತೊಂದು ಉಪಾಯ ಹೊಳೆಯಿತು.

"ಕಾಗಕ್ಕ, ನಿನಗೆ ಈ ಗೂಡಿನಲ್ಲಿ ಮಲಗಲಿಕ್ಕೆ ಜಾಗ ಸಾಕಾಗುವುದಿಲ್ಲ. ನನ್ನ ಮಕ್ಕಳು ದೊಡ್ಡವಾಗುತ್ತಿವೆ. ಗೂಡು ಸಹ ಹರಿದು ಹೋಗಿದೆ. ಗೂಡು ಕಟ್ಟಿದ ಮರದ ಎಲೆಯೆಲ್ಲಾ ಉದುರಿ ಹೋಗಿದೆ ಶತ್ರುಗಳಿಗೆ ನಮ್ಮ ವಾಸ ತಿಳಿಯುವಂತಾಗಿದೆ. ಮನುಷ್ಯರು ಬಿಲ್ಲು ಬಾಣಗಳಿಂದ ಹೊಡೆಯುತ್ತಾರೆ. ನರಿಯಣ್ಣನಂತೂ ಉಪಾಯವನ್ನು ಹುಡುಕುತ್ತಲೇ ಇದ್ದಾನೆ. ನಿನ್ನೆ ಬಂದು ಇಣಕಿ ಇಣಕಿ ನೋಡುತ್ತಿದ್ದ. ಇನ್ನು ನೀನು ಬೇರೆ ಗೂಡು ಕಟ್ಟಿಕೊ. ನಾನೂ ಬೇರೆ ಗೂಡು ಕಟ್ಟಿಕೊಳ್ಳುತ್ತೇನೆ" ಎಂದಿತು.

"ನೀನು ಬೇಕಾದರೆ ಬೇರೆ ಗೂಡನ್ನು ಕಟ್ಟಿಕೊ. ನಾನು ಈ ಗೂಡನ್ನೇ ಸರಿಪಡಿಸಿಕೊಳ್ಳುತ್ತೇನೆ" ಎಂದಿತು ಕಾಗೆ. ಗುಬ್ಬಿಯು "ಆಗಲಿ ಕಾಗಕ್ಕ" ಎಂದು ಹೇಳುತ್ತಾ ಹೊರಟಂತೆ ಮಾಡಿತು.

ಅಷ್ಟರಲ್ಲಿಯೇ ಒಂದು ನರಿಯಣ್ಣ ಹೊಂಚು ಹಾಕುತ್ತಿರುವುದು ಕಂಡಿತು. ಗುಬ್ಬಿಯು ಅದನ್ನು ಕಾಗೆಗೆ ತೋರಿಸಿತು. ಕಾಗೆಗೆ ಈಗ ನಿಜಕ್ಕೂ ಭಯವಾಯಿತು. ಇದಕ್ಕೆಲ್ಲ ತನ್ನ ಸೋಮಾರಿತನವೇ ಕಾರಣ ಎಂದು ಮನಗಂಡಿತು.

ಅಂದಿನಿಂದ ಕಾಗೆ ಎಂದೂ ಸೋಮಾರಿತನ ಮಾಡಲಿಲ್ಲ. ಗುಬ್ಬಿ ಹೊಸ ಗೂಡಿಗೆ ಹೋಗಿ ಸಂತೋಷವಾಗಿತ್ತು. ಆಗ ಅಲ್ಲಿಗೆ ಬಂದ ಕಾಗೆ ತನ್ನನ್ನು ಕ್ಷಮಿಸುವಂತೆ ಗುಬ್ಬಿಯನ್ನು ಕೇಳಿಕೊಂಡಿತು. ಗುಬ್ಬಿಯು ಗೂಡಿನ ಪಕ್ಕದಲ್ಲೇ ತಾನೂ ಒಂದು ಗೂಡನ್ನು ಕಟ್ಟಿಕೊಂಡಿತು. ಎರಡೂ ಸಂತೋಷದಿಂದ ಕಾಲ ಕಳೆದವು.

—ಎಚ್. ವಿ. ಬಿಂದುಮಾಲಿನಿ,
7ನೇ ತರಗತಿ, ಉತ್ತಮೇಶ್ವರ.

ಅಕ್ಕ–ತಮ್ಮ

"ಓದ್ ಸುಸ್ತಾಯ್ತು ಹೋಗ್ ಮಲಕ್ಕೋ
ಅದಕ್ಕೇ ನೀನು ಲಾಯಕ್ಕು !"
"ಸುಮ್ನೆ ಓದ್ತೀಯೋ
ಚರ್ಮ ಸುಲೀಬೇಕೋ
ಮುಖಕ್ಕೆ ಮಸಿ ಎರಚ್ಬೇಕೋ?"
"ಅಕ್ಕಾ ನೋಡ್ ನನ್ ರೇಗಿಸ್ಬೇಡಾ
ಕತ್ತರಿಸ್ಬಿಡ್ತೀನಿ ಜಡೆ
ತುಳಿದ್ಬಿಡ್ತೀನಿ ಪಡೆ"
ಪುಸ್ತಕ ಸರಿಸಿ ಕಣ್ಬಿಟ್ಟಳು ಅಕ್ಕ
"ಬಾ ನೋಡಾಣ" ಅಂತ ನಿಂತಳು ಪಕ್ಕ.
ಅಡಿಗೇ ಮನೆಗೆ ಓಡಿದ ತಮ್ಮ
"ಈಳಿಗೆ ಮಣೆಯ ಬೇಗ ಕೊಡಮ್ಮ !"
"ಈಳಿಗೇ ಮಣೆ ಯಾಕೋ ಮರಿ?"
"ಮಾಡ್ಬೇಕು ಹೆಚ್ಚಿ ಕೋಸಂಬರಿ !"
"ಏನ್ ಹೆಚ್ತೀಯೆ? ಸೌತೆ ಕಾಯೋ?"
"ಇಲ್ಲ ಈ ಅಕ್ಕನ್ ತಲೆಕಾಯಿ." "ಓ!"
"ಕೊಡ್ತೀಯಾ ಅಮ್ಮ?" "ಖಂಡಿತಾ ಇಲ್ವೋ !?"

ನೀತಿ : "ಮರಿ ನೀನು ಓದು, ಬರಿ
ಮಾಡ್ಬೇಡ ಅಕ್ಕನ್ ಕೋಸಂಬರಿ!"
(ಈಳಿಗೆಮಣೆ — ತರಕಾರಿ ಹೆಚ್ಚುವ 'ಮೆಟ್ಟುಗತ್ತಿ')

—ಎಚ್. ಪಾಂಡುರಂಗವಿಠಲ

ಕನಸು

ಬೆಳ್ಳಕ್ಕಿಯ ಹಾಗೆ
ಆಕಾಶದೆತ್ತರ ತೇಲುವ
ಚಿಮ್ಮುವ ಕನಸು.
ಮೊಗ್ಗಾಗಿ ಹೂವಾಗಿ
ಲತೆಯಲ್ಲಿ ಚಿಗುರಿ
ಹೆಮ್ಮರವಾಗುವ ಆಸೆಯ ಕನಸು
ಬೆಳ್ದಿಂಗಳಿನ ಚಂದ್ರನ
ಆ ಸವಿ ಬೆಳಕನ್ನು
ಹೀರಿ ನಲಿದಾಡುವ ಕನಸು

—**ಸುಮಿತ್ರ**, 5ನೇ ತರಗತಿ.
ಮಕ್ಕಳ ಕೂಟ, ಉತ್ತಮೇಶ್ವರ.

ನಾನೊಂದು ಕನಸು ಕಂಡೆ

ನಾನೊಂದು ಕಂಡೆ ಕನಸು
ಕನಸಿತ್ತು ಒಲು ಸೊಗಸು
ಅಕ್ಕ ಅಣ್ಣನೊಂದಿಗೆ
ನಾನು ಹೋದೆ ಅಮ್ಮನೂರ ಜಾತ್ರೆಗೆ
ಅತ್ತ–ಇತ್ತ ತಿಂಡಿ ತಿನಿಸು
ಎತ್ತ ನೋಡಲು ಭಕ್ಷ್ಯ ಭೋಜನ
ನೆರೆದಿತ್ತು ಸರ್ಕಸ್ ನೋಡಲು
ಸುತ್ತ–ಮುತ್ತಲು ಜನದ ನೂಕು
ನುಗ್ಗಲು.
ಸರ್ಕಸ್‌ಗೆ ಹೋದೆ ಅಕ್ಕ ಅಣ್ಣನೊಂದಿಗೆ
ನಡೆದಿತ್ತು ಸಿಂಹದಾಟ ಆರ್ಭಟದೊಂದಿಗೆ
ಹುಲಿಯೊಂದು ಅತ್ತ ಇತ್ತ ನೋಡುತಿರಲು
ನನ್ನ ಮೇಲೆ ನೆಗೆದು ಬರಲು
ಹೆದರಿದೆ ಪ್ರಾಣ ಭಯದೊಂದಿಗೆ
ಹೆದರಿಕೆಯ ತುಸು ಕಾವಲಿ
ಚಟ್ಟನೇ ಚೀರಿದೆ
ಅಮ್ಮ ಎದ್ದು ಏನು ಎನಲು
ಇದು ಕನಸು ಎಂದು ಕಂಡೆ.

—ಎಂ. ಜೆ. ಪಿ.ಕೆ.

ರೈತರ ಸಾಲ ಮನ್ನಾ ಆಗಬೇಕು ಏಕೆ?

ದೇಶದಲ್ಲಿ ಸುಮಾರು ಎಪ್ಪತ್ತು ಭಾಗ ರೈತರು ಮತ್ತು ರೈತ ಕಾರ್ಮಿಕರಿದ್ದಾರೆ. ಸ್ವಾತಂತ್ರ್ಯ ಬಂದು ನಲವತ್ತು ವರ್ಷವಾದರೂ ಒಗ್ಗಟ್ಟಾಗಿ ಹೋರಾಟ ಮಾಡದ ಒಂದು ಸಮೂಹವೆಂದರೆ ಈ ರೈತ ವರ್ಗ. ವರ್ಷವಿಡೀ ದುಡಿದು ಉತ್ಪಾದನಾ ವೆಚ್ಚವನ್ನು, ಆದಾಯವನ್ನು ಸರಿದೂಗಿಸಿಕೊಂಡು ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ರೈತನದು. ಬೇರೆಲ್ಲಾ ಉದ್ದಿಮೆದಾರರು ಸಂಘಗಳನ್ನು ಕಟ್ಟಿಕೊಂಡು ಧಂಧೆಗಳ ಪ್ರತಿಫಲವನ್ನು ತಾವೇ ನಿರ್ಧರಿಸಿಕೊಳ್ಳುತ್ತಿದ್ದರೆ ರೈತನಿಗೆ ಪ್ರತಿಫಲ ನಿರ್ಧರಿಸುವುದು ಬಳಕೆದಾರ. ಇದೊಂದು ವಿಪರ್ಯಾಸ ಅಲ್ಲದೆ ಸದಾ ಪ್ರಕೃತಿಯ ಚೆಲ್ಲಾಟದಲ್ಲಿಯೇ ರೈತನ ಬದುಕು ಸಾಗಬೇಕು.

ಈ ಹತ್ತು ವರ್ಷಗಳ ಅವಧಿಯಲ್ಲಿ ರೈತನ ಉತ್ಪನ್ನಗಳ ಬೆಲೆಗಳು ಸುಮಾರು ಎರಡು ಪಟ್ಟು ಆಗಿದ್ದರೆ ರೈತೇತರ ಉತ್ಪನ್ನಗಳ ಬೆಲೆಗಳು ಐದರಿಂದ ಎಂಟು ಪಟ್ಟು ಹೆಚ್ಚಿರುವುದನ್ನು ಕಾಣುತ್ತೇವೆ. ರೈತನ ಬೆಳೆ ಬಂದಾಗ ದರ ಇಳಿದು, ಆತನ ಕೈ ಬರಿದಾದಾಗ ದರ ಏರುವ ಏರುಪೇರುಗಳು ಆತನ ಬದುಕಿಗೊಂದು ಕೊಡಲಿ ಏಟು. ಆತನದೊಂದು ಬರಡಾದ ಬದುಕಾಗುತ್ತಿದೆ.

ರೂಪಾಯಿಯ ಬೆಲೆ ಕಡಿಮೆಯಾಗುತ್ತಿರುವ ಈ ವರ್ಷಗಳಲ್ಲಿ ಸಮಾಜದ ಎಲ್ಲಾ ಉದ್ದಿಮೆದಾರರು, ವ್ಯಾಪಾರಿ, ಅಧಿಕಾರಿ, ದಲ್ಲಾಳಿ, ರಾಜಕಾರಣಿಗಳೂ, ಹಣದ ಕೊರತೆಯನ್ನು ತುಂಬಿಸಿಕೊಳ್ಳಲು ಭ್ರಷ್ಟಾಚಾರದಂತಹ ಅನ್ಯ ಮಾರ್ಗಗಳನ್ನು ಬಳಸಿಕೊಳ್ಳುವಾಗ, ಅದಕ್ಕೆ ಬಲಿಯಾಗಿ, ಅದನ್ನು ತುಂಬಿಕೊಡುವುದೂ ಬಡಪಾಯಿ ಈ ರೈತ ವರ್ಗ ಮಾತ್ರ. ತನ್ನ ವೃತ್ತಿಯಲ್ಲಿ ಇಂಥ ಯಾವ ರೀತಿಯ ವಂಚನೆಯನ್ನೂ ಮಾಡಲಾಗದೆ ರೈತ ನಷ್ಟದಲ್ಲೇ ದುಡಿಯಬೇಕಾಗುತ್ತದೆ. ರೈತನ ಜೀವನ ಇರುವುದೇ ಪ್ರಾಮಾಣಿಕ ದುಡಿಮೆಯ ಬದುಕಿನಲ್ಲಿ. ಆದರೆ ಇತರೇ ವರ್ಗಗಳು ತಮ್ಮ ಕ್ಷೇತ್ರದಲ್ಲಿ ಅಪ್ರಾಮಾಣಿಕರಾದಷ್ಟು ಲಾಭವನ್ನು ಕಾಣುತ್ತಾರೆ

ಸ್ವಾತಂತ್ರ್ಯ ಬಂದ ಈ ವರ್ಷಗಳಲ್ಲಿ ರೈತ ತನ್ನ ಸಾಲವನ್ನು ತಾನೇ ತೀರಿಸಿಕೊಂಡಿದ್ದಾನೆ ಸರ್ಕಾರದ ಮುಂದೆ ಕೈ ಚಾಚಲಿಲ್ಲ. ಆದರೆ ರಾಜಕಾರಣಿಗಳನ್ನು ಓಲೈಸಿರುವ ಇನ್ನಿತರ ವರ್ಗಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಸಾಲ ಮನ್ನಾ ಆಗುತ್ತಲಿದೆ. ಈ ವ್ಯವಸ್ಥೆಯನ್ನು ಉಂಟು ಮಾಡಿದ ಭ್ರಷ್ಟ ರಾಜಕಾರಣಿಗಳು ಹಾಗೂ ಆಡಳಿತ ವರ್ಗ ರೈತನ ಪಾಲಿಗೆ ಶೂನ್ಯರಾಗಿದ್ದಾರೆ. ಹೀಗಾದಲ್ಲಿ ದಿಕ್ಕು ಕಾಣದ ರೈತ, ತನ್ನ ಉತ್ಪಾದನೆಗೆ ರೈತೇತರ ಉತ್ಪನ್ನಗಳಂತೆ ಬೆಲೆ ಸಿಗುವಂತೆ ಮಾಡಿ; ಇಲ್ಲವೇ ತನ್ನ ದುಡಿಮೆ ಕ್ಷೇತ್ರಕ್ಕೆ ಹಾಕಿದ ಸಾಲದ ಹಣವನ್ನು ಮರು ಪಾವತಿ ಮಾಡಲು ಸಾಧ್ಯವಿಲ್ಲ, ಮನ್ನಾ ಮಾಡಿ – ಎಂದು ಕೇಳುವುದು ನ್ಯಾಯವಲ್ಲವೆ?

ಇನ್ನು ಹೀಗೆ ರೈತರ ಸಾಲ ಮನ್ನಾ ಆದ ನಂತರವೂ ಸಹ, ಕೃಷಿಯನ್ನು ಒಂದು ಔದ್ಯೋಗಿಕ ಕ್ಷೇತ್ರದಂತೆ ಪರಿಗಣಿಸಿ ರೈತನು ಅನ್ನದಾತನಾಗಿ ಮರ್ಯಾದೆಯಿಂದ ದುಡಿಯುವಂತೆ ಸಾಧ್ಯವಾಗಲು, ಕಡಿಮೆ ಬಡ್ಡಿಯ ಸಾಲ, ಬೆಳೆ ವಿಮೆ, ಕೃಷಿ ಉತ್ಪನ್ನಗಳ ವೈಜ್ಞಾನಿಕ ಬೆಲೆ ನಿಗದಿ, ರೈತನ ಬೆಳೆಗೆ ಬೇಕಾದ ಅಗತ್ಯ ವಸ್ತು ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು ಸಹ ಸರ್ಕಾರದಿಂದ ಆಗಬೇಕಾಗಿದೆ. ವಂಶಪಾರಂಪರ್ಯವಾಗಿ ಸಾಲದ ಸಂಕೋಲೆಯಲ್ಲಿ ಉಸಿರು ಕಟ್ಟಿಕೊಂಡು ಜೀವನ ಸಾಗಿಸಿ ಬಂದ ರೈತ ವರ್ಗಕ್ಕೆ ಇತಿಹಾಸದಲ್ಲಿ ಒಂದು ಬಾರಿ ಸಾಲ ಮನ್ನಾ ಮಾಡಿ ಯೋಗ್ಯ ಸವಲತ್ತನ್ನು ಒದಗಿಸಿದಲ್ಲಿ ರಾಜ್ಯಾಂಗದ ಮೂಲತತ್ವವಾದ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಹಂಚಿದಂತಾಗುತ್ತದೆ.

—ಎಚ್. ವೆಂಕಟರಾವ್,
ಹುಲಿಕಲ್ಲು.

ಜಯಪುರ ಜನತೆಯ ಬದುಕು ಸಹನೀಯಗೊಳಿಸಬಲ್ಲ

ನಾಗರಿಕ ವೇದಿಕೆಯ ಸ್ತುತ್ಯ ಕಾರ್ಯಕ್ರಮ

● ಕೃಷ್ಣ ಭಂಡಾರಿ.

ಜಯಪುರ: ಕೆಲ ಸಮಯದಿಂದ 'ಚಪ್ಪೆ'ಯಾಗಿದ್ದ ಇಲ್ಲಿನ ವಾತಾವರಣ ಕಳೆದ 2–3 ವಾರಗಳಿಂದ 'ನಾಗರಿಕ ವೇದಿಕೆ'ಯ ಚಟುವಟಿಕೆಗಳಿಂದಾಗಿ 'ಬೆಚ್ಚ'ಗಾಗಿದೆ.

ಹಿಂದೆ ಲಂಚಕೋರ ಗ್ರಾಮ ಸೇವಕ, ಕಳ್ಳ ದಫೇದಾರ ಇವರುಗಳ ವಿರುದ್ಧವೆಲ್ಲ ಹೆಣಗಿದವರು ಏಕಾಂಗಿಗಳಾಗಿ ಬಹಳ ಕಷ್ಟ–ನಷ್ಟ ಅನುಭವಿಸುವುದು ಅಥವಾ ನಿರೀಕ್ಷಿತ ಯಶ ಪಡೆಯದೆ ಇರುವುದು—ಹೀಗೇ ಆಗಿತ್ತು. ಬಹುಶಃ ಇದೇ ಅನುಭವ ಇಲ್ಲಿನ ನಾಗರಿಕರ ಮನಸ್ಸಿನಲ್ಲಿ ಸುಪ್ತವಾಗಿ ಕೆಲಸ ಮಾಡಿದ್ದರಿಂದ ಇರಬೇಕು—ಈ ಬಾರಿ ಇಂಥ ಅಕ್ರಮ, ಅನ್ಯಾಯ ಅಥವಾ ಸಮಸ್ಯೆಗಳ ಬಗ್ಗೆ ಸಾಮೂಹಿಕವಾಗಿ ಶ್ರಮಿಸಲು ನಾಗರಿಕರು ಮುಂದಾಗಿದ್ದಾರೆ. ಇಂಥ ಚಿಂತನೆಯ ಫಲವೇ ನಾಗರಿಕ ವೇದಿಕೆ.

ಸರ್ಕಾರದ ಕಾನೂನಿನಿಂದ ನಾಗರಿಕರಿಗೆ ನ್ಯಾಯ ದೊರೆತು, ಸರ್ಕಾರದ ಬೊಕ್ಕಸ ತುಂಬುವ ಬದಲು, ನಾಗರಿಕರಿಗೂ ಅನ್ಯಾಯಕ್ಕೆ ಅವಕಾಶ ನೀಡಿ, 'ಬ್ಲಾಕ್ ಮೇಲ್' (ಬೆದರಿಕೆ) ತಂತ್ರದಿಂದ ತಮ್ಮ ಡೊಳ್ಳು ತುಂಬಿಕೊಳ್ಳುತ್ತಿದ್ದ ತೂಕ–ಅಳತೆ ಇಲಾಖೆ ಅಧಿಕಾರಿಗಳ ವಿರುದ್ಧ ವರ್ತಕರ ಸಾಮೂಹಿಕ ಪ್ರತಿಭಟನೆಯ ಅಸ್ತ್ರವಾಗಿ ಈ ವೇದಿಕೆ ಆರಂಭವಾದರೂ ಅದು ಬಹುಪಾಲು ಎಲ್ಲ ನಾಗರಿಕರನ್ನೂ ಆಕರ್ಷಿಸುತ್ತಿದೆ. ಅಂತೆಯೇ ಹಲವು ನಾಗರಿಕ ಸಮಸ್ಯೆಗಳನ್ನೂ ಕೈಗೆತ್ತಿಕೊಳ್ಳುತ್ತಿದೆ.

ಜಯಪುರದ ಹೊಸ ಬಸ್ ಸ್ಟಾಂಡ್ ಆರಂಭವಾದ ಮೇಲೆ ಊರಿನೊಳಗೆ ಬಸ್ಸುಗಳು ನಿಲ್ಲುತ್ತಿರಲಿಲ್ಲ. ಈ ಸಮಸ್ಯೆ ಬಗ್ಗೆ [illegible] ಪಂಚಾಯ್ತಿ ಜೊತೆ ವ್ಯವಹರಿಸಿ '[illegible]ಪ್ರಿ ಸ್ಟಾಪ್' ದೊರಕಿಸುವಲ್ಲಿ ಯಶಸ್ವಿ[illegible]ದ ವೇದಿಕೆ, ವಾಹನ ಸಂಚಾರದ ಸಮ[illegible] ಬಗ್ಗೆ ಜಿಲ್ಲಾಧಿಕಾರಿಗಳವರೆಗೆ ನಿಯೋಗ ಒಯ್ದು, ಪರಿಹಾರದ ಭರವಸೆ ಪಡೆದು ಬಂದಿದೆ.

(ಹೊಸ ಬಸ್ ನಿಲ್ದಾಣ ಆರಂಭವಾದುದು ಜನರಿಗೆ ಪ್ರಚಲಿತವಾಗಲು ಸ್ವಲ್ಪ ಸಮಯ ಪೇಟೆಯೊಳಗೆ ಸ್ಟಾಪ್ ಒದಗಿಸುವುದಿಲ್ಲವೆಂದು ಮೊದಲೇ ಹೇಳಿದ್ದಾಗಿಯೂ 15 ದಿನದ ನಂತರ ತಾವಾಗಿಯೇ ಒದಗಿಸಿದ್ದಾಗಿಯೂ ಮಂಡಲ ಪ್ರಧಾನ ಎ. ಸಿ. ವಜ್ರಪ್ಪ ಹೇಳುತ್ತಾರೆ. —ಸಂ.)

ಅಲ್ಲದೆ ಈಚೆಗೆ ಮಂಡಲ ಪಂಚಾಯತು ಮನೆಗಂದಾಯವನ್ನು 4 ಪಟ್ಟು ಏರಿಸಿರುವುದನ್ನು ವಿರೋಧಿಸಲು ನಿರ್ಣಯಿಸಿರುವ ವೇದಿಕೆ, ಹಲವು ಸಮಯದಿಂದ ನನೆಗುದಿಯಲ್ಲಿರುವ ಕುಡಿವ ನೀರಿನ ಸಮಸ್ಯೆಯ ಬಗ್ಗೆಯೂ ಹೋರಾಡಲು ನಿರ್ಧರಿಸಿದೆ.

ವೇದಿಕೆಯ ಒಂದು ವೈಶಿಷ್ಟ್ಯವೆಂದರೆ, ಅದರಲ್ಲಿ ವೃತ್ತಿ ನಿರತ ರಾಜಕಾರಣಿಗಳಿಗೆ ಯಾವುದೇ ಪದವಿಯನ್ನು (ಪದಾಧಿಕಾರ) ನೀಡದೆ ಇದೊಂದು ರಾಜಕೀಯ ಮುಕ್ತ ವೇದಿಕೆಯಾಗಿರುವುದು. ಇದು ರಾಜಕೀಯ

(5ನೇ ಪುಟಕ್ಕೆ)

ಯಮದೂತನಾಗಿರುವ ರಸ್ತೆ ತಿರುವು

ಹೆಗ್ಗಾರುಕೊಡಿಗೆ: ಇಲ್ಲಿಗೆ ಸಮೀಪದ ಗಡಿಕಲ್ ಬಳಿಯ ಬಂಡೆ ತಿರುವು ಮಾರಕ ಸ್ಥಳವಾಗಿ ಪರಿಣಮಿಸಿದೆ. ಇಲ್ಲಿ ರಸ್ತೆ ಬಹುಮಟ್ಟಿಗೆ ಹಿಮ್ಮುರಿಯಾಗುವಷ್ಟು ತಿರುಗುವುದಲ್ಲದೆ ತೀರಾ ಇಕ್ಕಟ್ಟಾಗಿದ್ದು, ತಿರುವಿನಲ್ಲಿರುವ ಬಂಡೆಗಳಿಂದಾಗಿ ಎದುರು ಬದುರು ವಾಹನಗಳು ಕಾಣಿಸುವುದಿಲ್ಲ.

ಹೀಗಾಗಿ ವಾರಕ್ಕೆ ಒಂದೆರಡಾದರೂ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. 1978ರಲ್ಲಿ ಇಲ್ಲಿ ಒಂದು ಮಿನಿ ಬಸ್ಸಿಗೂ ಮೋಟಾರ್ ಸೈಕಲ್‌ಗೂ ಡಿಕ್ಕಿಯಾಗಿ ಸ್ಥಳೀಯ ವ್ಯಾಪಾರಿಯೊಬ್ಬರು ಸ್ಥಳದಲ್ಲೇ ಸಾವಪ್ಪಿದ್ದರು. ಈಚೆಗೆ ಮಾಗಡಿ ಶಾಸಕರ ವಾಹನ ಟ್ರಾಕ್ಟರ್‌ಗೆ ಬಡಿದಿತ್ತು. ಮಾರ್ಚ್ 8ರಂದು ಪ್ರವಾಸಿ ಬಸ್ ಮತ್ತು ಏತ ನೀರಾವರಿ ಇಲಾಖೆ ಜೀಪು ಡಿಕ್ಕಿಯಾಗಿ, ಬಸ್ ಬಹು ನಿಧಾನವಾಗಿ ಚಲಿಸುತ್ತಿದ್ದುದರಿಂದ ಜೀಪು ಕೂದಲೆಳೆಯಷ್ಟರಲ್ಲಿ ಭಾರೀ ಅಪಘಾತದಿಂದ ಪಾರಾಯಿತು.

ಈ ರಸ್ತೆಯನ್ನು ನೇರಗೊಳಿಸುವಂತೆ ಜನತೆ ಹಲವಾರು ವರ್ಷಗಳಿಂದ ಮನವಿ ಮಾಡುತ್ತಿದ್ದಾರೆ. ಹೆಚ್ಚೇನೂ ಕಷ್ಟವಾಗಲೀ, ಖರ್ಚಾಗಲೀ, ಯಾರದೇ ತಕರಾರು ಆಗಲೀ ಇಲ್ಲದ ಈ ಕೆಲಸಕ್ಕೆ ಕೂಡ ಸಂಬಂಧಪಟ್ಟವರು ಇನ್ನೂ ಗಮನ ಹರಿಸಿಲ್ಲ ಎಂದು ಗ್ರಾಮಸ್ಥರು ದೂರುತ್ತಾರೆ.

ಪದ್ಯದಂಗಳ

ಕಪ್ಪು ನಾಡಿನ ಬೆಳ್ಳಿ ತಾ[ರೆ]

ವಿಶ್ವದ ಕಣ್ಣು ತೆರಸಿದ ಮಂಡೇಲಾ
ವರ್ಣನೀತಿಯ ಜರಿದು
ಎಲ್ಲರೊಂದೇ ಎಂದೆ
ಗಾಳಿ, ನೀರು, ಬೆಳಕು ಒಂದೇ,
ಕರಿಯ–ಬಿಳಿಯ ಏಕೆ ತಂದೆ?
ಬೇಕು ಜಗಕೆ ನ್ಯಾಯ ಒಂದೇ
ಎಂದು ಮನದಿ ನೊಂದೆ.

ನ್ಯಾಯಕ್ಕಾಗಿ ನಡೆದೆ ಮುಂದೆ
ಕಳೆದೆ ಪ್ರಾಯ ತುರಂಗದೆ
ಅನ್ಯಾಯಕ್ಕೆಂದೆಂದೂ ಬಾಗದೆ
ದಬ್ಬಾಳಿಕೆಗೆ ಎದುರಾದೆ
ನಿಜದಿ ನೇರಕೆ ನಡೆದೆ,
ಮರುಕ–ಪ್ರೇಮಕೆ ಒಲಿದೆ

ಹಾಡಿ ಹರಸಿತು ನಿನ್ನ ನಾಡು ದೇಶ
ಬಳಿಗೆ ಒಲಿದವು ಮನ್ನಣೆ
"ಮುಕ್ತಿ ಇಲ್ಲದ ಪ್ರಶಸ್ತಿ,–
ಚಿನ್ನದ ಸಂಕೋಲೆ!
ಕೊಳೆಯಲಿ ಇಲ್ಲೇ, ಸೆರೆಮನೆಯಲ್ಲೇ!
ಬೇಕು ಎಲ್ಲರಿಗೂ ಅಧಿಕಾರ
ಕರಿ, ಬಿಳಿ ಭೇದ ಬಿಡಿ
ಹೃದಯ ಹೀನತೆ ಬಿಡಿ,
ಮಾನವತೆಗೆ ಜೀವ ಕೊಡಿ!"
ಕದಡಿದ ನೀರು ತಿಳಿಯಾದಂತೆ
ತೆರೆಯಿತು ನಿಜದ ಬದುಕಿನ ಬಣ್ಣ
ಮುಟ್ಟಲಿಹೆ ನೀನು ಸಾಧನೆ ಗುರಿಯ
ಕಪ್ಪು ನಾಡಿನ ಬೆಳ್ಳಿ ತಾರೆ
ಜಗದ ಜನರ ಧ್ರುವತಾರೆ

—ದ. ರಾಜಣ್[ಣ]

ಓದುಗರ ಪತ್ರ

ಅರಣ್ಯ ಇಲಾಖೆ ಗಮನ[ಕ್ಕೆ]

ಪ್ರಿಯರೆ,

ಅರಣ್ಯ ಇಲಾಖೆಯವರು ಬೆ[illegible] ಗುಡ್ಡ, ಬಯಲುಗಳಲ್ಲಿ ಅರಣ್ಯ ಬೆ[illegible] ಗಿಡಗಳನ್ನು ನೆಡುತ್ತಿರುವುದು ಸ್ತುತ್ಯ[illegible]ಗೆ ಮಾಡುವಾಗ ಹಲವೆಡೆ ವಿದ್ಯುತ್ [illegible]ತ್ತು ಫೋನ್ ತಂತಿಗಳ ಕೆಳಗೂ ನೆಟ್ಟಿ[illegible]ವುದುಂಟು. ಅವು ಬೆಳೆದು ದೊಡ್ಡದಾ[illegible] ಅವನ್ನು ಕತ್ತರಿಸಲೇಬೇಕಾಗುತ್ತದೆ. [illegible] ಕೆಲವು ರಸ್ತೆ ತಿರುವುಗಳ ಬದಿಯಲ್ಲಿ [illegible] ಗಿಡಗಳನ್ನೂ ಕತ್ತರಿಸಬೇಕಾಗುತ್ತದೆ.

ಹೀಗೆ ಗಿಡ ಬೆಳೆಸಿ ಕಡಿಯುವುದ[illegible] ಆ ಜಾಗಗಳನ್ನು ಹಾಗೇ ಬಿಟ್ಟು ಬೇ[illegible]ಗಗಳಲ್ಲಿ ಅದೇ ಗಿಡಗಳನ್ನು ನೆಡಬಹುದ[illegible]

ಎರಡನೆಯದಾಗಿ, ನೆಟ್ಟ ಗಿಡಗಳ[illegible]ವು ಸಾಯುವ ಕಾರಣ, ಒಂದೊಂದು[illegible]ಯಲ್ಲಿ 2–3 ಗಿಡಗಳನ್ನು ನಾಟಿ ಮಾ[illegible] ಕೆಲವೆಡೆ ಎಲ್ಲವೂ ಬದುಕಿ ಎಲ್ಲವುಗಳ[illegible] ಬೆಳವಣಿಗೆಯೂ ಕುಂಠಿತವಾಗಿರುತ್ತದೆ [illegible]ಗಳಲ್ಲಿ ಉತ್ತಮವಾದ ಒಂದನ್ನು [illegible] ಮಿಕ್ಕವನ್ನು ಕಿತ್ತು ಹಾಕುವುದು [illegible]

ಅರಣ್ಯ ಇಲಾಖೆ ಈ 2 ವಿಷಯಗ[ಳತ್ತ] ಗಮನ ಹರಿಸಲೆಂದು ಆಶಿಸುತ್ತೇನೆ.

—ಬಾಣಂಕಿ ಪ್ರಕಾಶ್, [illegible]

ಸಮಸ್ಯೆಗಳು, ಸಮಸ್ಯೆಗಳು, ಮತ್ತೂ ಮತ್ತೂ ಸಮಸ್ಯೆಗಳು....

[ಕಳೆದ 7ನೇ ತಾರೀಖಿನಿಂದ 20 ರವರೆಗೆ ಹಳ್ಳಿಗಳಲ್ಲಿ ಸಂಚರಿಸಿದಾಗ ನಮ್ಮ ಓದುಗರು, ಹಳ್ಳಿಗರು ಮುಂದಿಟ್ಟ ಹಲವಾರು ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದೆ ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇತ್ತ ವಿಶೇಷ ಗಮನ ಕೊಡುತ್ತಾರೆಂಬ ನಿರೀಕ್ಷೆ ಹಳ್ಳಿಗಾಡಿನ ಬಸವಳಿದ ಜನತೆಯದು —ಸಂಪಾದಕ.

ಕರೆಂಟ್ 'ಕಟ್' ಆದೊಡನೆ ದೂರವಾಣಿಯೂ 'ಕಟ್'

ಬಸರಿಕಟ್ಟೆ ಮತ್ತು ಶಾಂತಿಗ್ರಾಮ ದೂರವಾಣಿ ಕೇಂದ್ರಗಳ ಸಮಸ್ಯೆ ಇದು. ಇಲ್ಲಿ ಬ್ಯಾಟರಿಗಳು ಹಳತಾಗಿ ಬಹಳ ಕಾಲವಾಗಿದೆ. ರೀಚಾರ್ಜಿಂಗ್ ಸಾಧ್ಯವಿಲ್ಲ. ಬದಲಾವಣೆಗೆ 40-50 ಸಾವಿರ ರೂ. ದೊರಕಿಸಿದವರಿಲ್ಲ. ಶಾಂತಿಗ್ರಾಮದಲ್ಲಿದ್ದ ಒಂದು 'ಹಪ್ಪು' ಜನರೇಟರನ್ನು ಬಸರಿಕಟ್ಟೆಗೆ ಒಯ್ದಿದ್ದಾರೆ ಅದು ಕೆಲಸ ಮಾಡುವುದೂ ಇಲ್ಲ, ಅದಕ್ಕೆ ಅಲ್ಲಿ ಸೂಕ್ತ ಜಾಗವೂ ಇಲ್ಲ. ಎರಡೂ ಕಡೆಗೆ ಬೇರೆ ಜನರೇಟರ್‌ನ ಆಶ್ವಾಸನೆ ಗಾಳಿಯಲ್ಲೇ ತೇಲುತ್ತಿದೆ.

ಹೀಗಾಗಿ, ಈ ಎರಡು ಕೇಂದ್ರಗಳು ವ್ಯಾಪಿಸಿರುವ ಅರ್ಧ ಮೇಗುಂದ ಹೋಬಳಿಯ ದುರ್ಗಮವಾದ ಹಳ್ಳಿಗಳಲ್ಲಿ ಎರಾಬಿರ್ರಿ ವಿದ್ಯುತ್ ನಿಲುಗಡೆಯಂತೆಯೇ ದೂರವಾಣಿ 'ಸೌಕರ್ಯವೂ' ಆಗಿದೆ. ಹೀಗೆ ಬೆಳಿಗ್ಗೆ 6 ರಿಂದ 9 ಮತ್ತು ಮಧ್ಯಾಹ್ನ 3 ರಿಂದ 6 ಗಂಟೆವರೆಗೂ ಖಾತ್ರಿಯಾಗಿ ಇಲ್ಲವಾಗುವ ಫೋನ್ ಮತ್ತೇತಕ್ಕೆ?

* * * *

ಕರೆಂಟ್: ಬಿಲ್ ಪಾವತಿಗೆ ಮಾತ್ರ !

ಹಳ್ಳಿಗಾಡಲ್ಲಿ ಯಾವ ಹೊತ್ತಲ್ಲಿ ನೋಡಿದರೂ ಕರೆಂಟ್ ಇರುವುದಿಲ್ಲ. ರಾತ್ರಿ 7-8 ಗಂಟೆಗೆ ಹೋದರೆ ಬೆಳಗಿನವರೆಗೂ ಕಗ್ಗತ್ತಲೆಯೇ ಬದುಕು. ಛಾಯಾವಾರದ ದೂರದರ್ಶನ ಕಾರ್ಯಕ್ರಮಕ್ಕೂ ಇಲ್ಲ. ಬೇರೆ ಮನರಂಜನೆಗಳೇ ಇಲ್ಲದ ಚಿತ್ರದಕೊಳಲಿನಂಥ ಕಾಡು ಮೂಲೆಗಳಲ್ಲಿ ಒಂದೆರಡು ಟಿ.ವಿ ಗಳು ಹತ್ತಾರು ಜನರಿಗೆ ಕೆಲ ಹೊತ್ತಾದರೂ ಮನರಂಜನೆ ಒದಗಿಸುತ್ತಿದ್ದುವು ಈಗ ಅದಕ್ಕೂ ಸಂಚಕಾರ

ಅಂತೆಯೇ, ಬೆಳಿಗ್ಗೆ 6ರಿಂದ 8 ಹಾಗೂ ಸಂಜೆ 6ರಿಂದ 9ರವರೆಗೆ ವಿದ್ಯುತ್ ನಿಲ್ಲಿಸಬಾರದೆಂದೂ ಹಳ್ಳಿಗಾಡಿನ ಒಕ್ಕೊರಲ ಬೇಡಿಕೆ. * • *

ದೂರಕಿತ್ತಾದ ರಸ್ತೆಯೋ ಇದು ! ?

ಬಸರಿಕಟ್ಟೆ-ಜಯಪುರ ರಸ್ತೆಯಲ್ಲಿ ಬಿಳಾಲುಕೊಪ್ಪ-ಬಸರಿಕಟ್ಟೆ ಭಾಗ ಹತ್ತಾರು ವರ್ಷದಿಂದ ತೀರಾ ಅಯೋಗ್ಯ ಸ್ಥಿತಿಯಲ್ಲಿತ್ತು. ಕಳೆದ ವರ್ಷ ಟಾರ್ ಆಗಿತ್ತು ಈಗ ನೋಡಿದರೆ ಇದು ಹೊಸದಾಗಿ ಟಾರ್ ಆದ ರಸ್ತೆ ಎಂದು ಯಾರೂ ನಂಬುವುದಿಲ್ಲ. ಅಷ್ಟು ಅಧ್ವಾನವಾಗಿದೆ ಇದಕ್ಕೆ ಟಾರ್ ಹಾಕಿ (ದಂತೆ ಮಾಡಿ ಬಿಲ್ ಪಡೆದು) ಉದ್ಧಾರವಾದ ಕಂಟ್ರಾಕ್ಟರ್ ಪುಣ್ಯಾತ್ಮ, ಇಂಜಿನಿಯರ್‌ಗಳ ಹೊಟ್ಟೆ ತಣ್ಣಗಿರಲಿ ! (ಥಂಡಿ ಬಟ್ಟೆ ?) ಎಂದು ಗ್ರಾಮಸ್ಥರು ಹಾರೈಸುತ್ತಾರೆ !!

ಇದೇ ರಸ್ತೆ ಜಯಪುರದವರೆಗೂ ಹೆಚ್ಚೂ ಕಡಿಮೆ ಇದೇ ಸ್ಥಿತಿಯಲ್ಲೇ ಇದೆ. ಮಧ್ಯೆ ಸ್ವಲ್ಪ ಮಾತ್ರ 'ಪ್ಯಾಚ್ ವರ್ಕ್' ಮಾಡಿದ್ದಾರೆ.

* * *

ಸಂಪರ್ಕ ಕಡಿಯುವ ಸೇತುವೆ!

ಸೇತುವೆ ಯಾತಕ್ಕೆ ಸ್ವಾಮಿ? ರಸ್ತೆ ಸಂಪರ್ಕಕ್ಕೆ ಎಂದಿರಾ? ನಿಮಗೆ ಅಷ್ಟೇ ಗೊತ್ತು! ಕಲ್ಲುಗುಡ್ಡೆ-ಕೊಗ್ರೆ ರಸ್ತೆಗೆ ಬನ್ನಿ. ಇಲ್ಲಿನ ಕೊರೋಡಿ (ಕೊಟ್ರೊಳ್ಳಿ) ಹಳ್ಳಕ್ಕೆ ಕಳೆದ ವರ್ಷ ಕಾಲು ಸೇತುವೆ ಅರ್ಧ ಆಗಿ ನೆರೆಯಲ್ಲಿ ಕೊಚ್ಚಿ ಹೋಗಿತ್ತು. ರಸ್ತೆ ಸಂಪರ್ಕ ಕಡಿದಿತ್ತು.

ಈಗ ಪುನಃ ಆಗುತ್ತಿದೆ. ಹಾಗೆಂದು ಹೇಳಿ 15-20 ದಿನದ ಹಿಂದೆ ಇದ್ದ ಸಂಪರ್ಕವನ್ನೂ ಕಡಿದು ಹಾಕಿ ಕೆಲಸ ಶುರು ಮಾಡಿ ನಿಲ್ಲಿಸಿದ್ದಾರೆ. ಇನ್ನು ಅದು ಮತ್ತೆ ಶುರುವಾಗಿ ಮುಗಿಯುವುದು ಯಾವತ್ತಿಗೋ?

ಈಗ ಕಲ್ಲುಗುಡ್ಡೆ, ಬೆಂಡೆಹಕ್ಲು, ಸಾತ್ಕೊಡಿಗೆ, ಮೆಣಸಿನ ಹಾಡ್ಯ ಇತ್ಯಾದಿ ಹತ್ತಾರು ಹಳ್ಳಿಗಳ ಇಡೀ ಸಂಚಾರ ವ್ಯವಸ್ಥೆ ಬಿಳಾಲುಕೊಪ್ಪದ ಮೂಲಕ 7-8 ಮೈಲಿ ಸುತ್ತಿಕೊಂಡೇ ಹೋಗಬೇಕು. ಕಲ್ಲುಗುಡ್ಡೆ-ಶಾಂತಿಗ್ರಾಮ ನಡುವೆ ಮಾಡ ದೇವಸ್ಥಾನದ ಮೂಲಕ ಸಾಗುವ ರಸ್ತೆಯೂ ಸಂಚಾರಕ್ಕೆ ಆಗುವಂತಿಲ್ಲ. ಏನಿದ್ದರೂ ಸರ್ಕಾರಿ ಲೆಕ್ಕಕ್ಕೆ ಮಾತ್ರ !

ಈಗ ಹೇಳಿ, ಸೇತುವೆ ಆಗುವುದು ಸಂಪರ್ಕ ಕಡಿಯುವುದಕ್ಕಲ್ಲವೆ? ಎನ್ನುತ್ತಾರೆ ಹಳ್ಳಿಯ ಜಾಣರು.

ಹರಿಜನರ ಭೂಮಿ ನುಂಗಿ. ಈಗ ಊರಿಗೇ ಬೇಲಿ ಹಾಕಿರುವ ಸರ್ವೇಯರ್ ಭೂಪ

ಕೊಪ್ಪ ತಾ॥ ಕರಿಮನೆ ಗ್ರಾಮದ ಸ. ನಂ. 55 ರಲ್ಲಿ ತಿಪ್ಪಮ್ಮ, ಸಿದ್ಧಮರಿಯಣ್ಣ, ರಾಮಯ್ಯ, ಅಲಿಬಾಬ ಮೂಸೆ ಈರಯ್ಯ ಎಂಬ ಹರಿಜನರು ಹಾಗೂ ಲಕ್ಷ್ಮಮ್ಮ ಕೋಂ ಅನಂತಯ್ಯ (ಹಿ.ವರ್ಗ) ಇವರುಗಳಿಗೆ 1978 ರಲ್ಲಿ ತಲಾ 2 ಎಕರೆ ಭೂಮಿ ಮಂಜೂರಾಗಿ ಸಾಗುವಳಿ ಚೀಟಿ ನೀಡಲಾಗಿತ್ತು. ಕೆಲವರು ಅಲ್ಪ-ಸ್ವಲ್ಪ ಕೃಷಿ ಮಾಡಲೂ ಯತ್ನಿಸಿದ್ದರು.

ಆದರೆ ಅದೇ ಸ. ನಂ. ನಲ್ಲಿ ತನ್ನ ಕುಟುಂಬದವರ ಹೆಸರಲ್ಲಿ ಸ್ವಲ್ಪ ಜಮೀನು ದರ್ಖಾಸ್ತು ಮಾಡಿದ ದಾಸೇಗೌಡ ಎಂಬ ಸರ್ವೆಯರ್-ಈಗ ಕೊಪ್ಪ ಹೋಬಳಿ ಸರ್ವೆಯರ್-ಈ ಎಲ್ಲ ಬಡವರ ಭೂಮಿಯನ್ನೂ ಗುಳುಂ ಮಾಡಿ 4-5 ವರ್ಷದ ಹಿಂದೆ ಗಿಡ ಹಾಕಿ ದಬ್ಬಾಳಿಕೆ ನಡೆಸುತ್ತಿದ್ದಾರೆ ಈ ಹರಿಜನರ ಕಾಲೊನಿಯ ಹಿಂದೆಯೇ ಅವರ ಬೇಲಿ ಹೋಗುತ್ತದೆ.

ಅದಷ್ಟೂ ಅರಗಿತೆಂದು ಅನ್ನಿಸಿ ಈಗ ಇಡೀ ಕಾಡು-ಗುಡ್ಡದ ಸುಮಾರು 150

(6ನೇ ಪುಟಕ್ಕೆ)

ಶೃಂಗೇರಿ ತಾಲ್ಲೂಕು ಪಂಚಾಯಿತ್ತಿ ಸಮಿತಿ ಸಭೆ ವಿಶೇಷಗಳು

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಈ ತಿಂಗಳ ತಾ. ಪಂ. ಸ. ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿ ಮಲ್ಲಿಕಾರ್ಜುನ ಪ್ರಸನ್ನ ಭಾಗವಹಿಸಿದ್ದರು. ತಾಲ್ಲೂಕಿನ ಅಭಿವೃದ್ಧಿ-ಸಮಸ್ಯೆಗಳ ವಿವರವಾದ ಚರ್ಚೆ ನಡೆಯಿತು.

ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಬಹುತೇಕ ರಸ್ತೆಗಳು ರೋಲರ್ ಇಲ್ಲದೆ ಸ್ಥಗಿತಗೊಂಡಿದ್ದು, ಮಾರ್ಚ್ ಕೊನೆಯೊಳಗೆ ಹಾಗೂ ಮಳೆಗಾಲ ಪ್ರಾರಂಭವಾಗುವ ಮೊದಲುಕೆಲಸಗಳು ಆಗಬೇಕಿದ್ದು, ಯಾವ ಮೂಲದಿಂದಲಾದರೂ ರೋಲರ್ ಸಂಪಾದಿಸಿ ಕೆಲಸ ಮುಗಿಸುವಂತೆ ಇಂಜಿನಿಯರ್‌ಗಳಿಗ ಶಾಸಕರು ಸೂಚಿಸಿದರು

ಜನತಾ ನಿವೇಶನಗಳಿಗೆ 1000ಕ್ಕೂ ಹೆಚ್ಚು ಅರ್ಜಿಗಳು ಬಾಕಿಯಿದ್ದು, ಮಂಡಲದವರು ಶಿಫಾರ್ಸುಗಳನ್ನು ಕಳಿಸಿಕೊಟ್ಟರೆ ಕೂಡಲೇ ಮಂಜೂರು ಮಾಡುವುದಾಗಿ ತಹಸೀಲ್ದಾರ್ ಒಪ್ಪಿಕೊಂಡರು.

"ಆಮಿಷಕ್ಕೆ ಕೆಲಸ"

ಗೋಬರ್ ಗ್ಯಾಸ್ ಸಹಾಯ ಧನಕ್ಕೆ ಜಿ.ಪ. ಲೆಕ್ಕಪತ್ರ ವಿಭಾಗದಲ್ಲಿ ಅಡ್ಡಿಯಾಗುತ್ತಿದ್ದು, ಖುದ್ದು ಹೋಗುವವರಿಗೆ ಮಾತ್ರ ಹಣ ಮಂಜೂರಾಗುತ್ತಿದೆ ಅಲ್ಲಿ ಆಮಿಷಕ್ಕೆ ಕೆಲಸವಾಗುತ್ತಿದೆ ಎಂದು ಶ್ರೀನಿವಾಸ್ ದೂರಿದಾಗ, ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ, ಸಭೆಯಲ್ಲಿ ಹಾಜರಿದ್ದ ಜಿ. ಪ. ಉಪ ಕಾರ್ಯದರ್ಶಿ ಚಂದ್ರಶೇಖರ್ ಭರವಸೆ ಕೊಟ್ಟರು.

ಶೃಂಗೇರಿಯ ಭೂಸಾರ ಸಂರಕ್ಷಣೆ ಇಲಾಖೆಗೆ ಮಂಜೂರಾಗಿದ್ದ 50 ಸಾವಿರ ರೂ. ಮೂಡಿಗೆರೆಗೆ ವರ್ಗಾವಣೆ ಆದ ವಿಚಾರ ಕುತೂಹಲ ಕೆರಳಿಸಿತ್ತು. ಅಲ್ಲಿನ ಭೂಸಾರ ಸಂರಕ್ಷಣಾ ಅಧಿಕಾರಿ ಶಾಸಕಿ ಮೋಟಮ್ಮನವರ ಪತಿಯಾಗಿದ್ದು, ಅವರ ಪ್ರಭಾವ ಇದಕ್ಕೆ ಕಾರಣ ಎನ್ನಲಾಗಿತ್ತು. ಈ ತಿಂಗಳಲ್ಲಿ ಈ ಹಣ ವಾಪಸು ಶೃಂಗೇರಿ ತಾಲ್ಲೂಕಿಗೆ ಬಂದಿದೆ ಎಂದು ಅಧಿಕಾರಿ ತಿಳಿಸಿದರು.

ಯಡಗುಂದ ಹಗರಣ

ಸಭೆಯ ವಿಶೇಷ ಗಮನ ಸೆಳೆದ ವಿಚಾರ ಮೇಗೂರಿನ ಯಡಗುಂದ ಕಾಡಿನ ಹಗರಣವಾಗಿತ್ತು. ಅಗಳಗಂಡಿ ಮಂಡಲ ಪ್ರಧಾನ-ಉಪ ಪ್ರಧಾನರಲ್ಲದೆ ಹಲವು ಮಂದಿ ಸ್ಥಳೀಯರೂ ಸಭೆಗೆ ಬಂದಿದ್ದು, ಬಿಸಿ ಬಿಸಿ ಚರ್ಚೆಯಾಯಿತು. (ಅದರ ವಿವರ 'ಮುಂಜಾವು' 11-3-90ರ ಸಂಚಿಕೆಯಲ್ಲಿದೆ.) ಅರಣ್ಯಕ್ಕೆ ಸಂಬಂಧಿಸಿದ ವಿಚಾರ ಶಾಸಕರು ಕೇಳುವುದೆಂದರೇನು ಎಂಬ ಅಹಂಕಾರ ಅಧಿಕಾರಿಗಳಲ್ಲಿ ಇದ್ದಂತೆ ಕಾಣುತ್ತದೆ ಎಂದ ಶಾಸಕರು, ಇಲಾಖೆಯ ಎಲ್ಲಾ ಆಗುಹೋಗುಗಳನ್ನು ಪ್ರತಿ ತಿಂಗಳೂ ಸಭೆಗೆ ತಿಳಿಸುವಂತೆ ರೇಂಜರಿಗೆ ಸೂಚಿಸಿದರು.

ಈ ವಿಚಾರದಲ್ಲಿ ಡಿಎಫ್‌ಓಗೆ ಎಲ್ಲಾ ಅಕ್ರಮಗಳನ್ನೂ ತೋರಿಸಿ-ತಿಳಿಸಿಕೊಟ್ಟಿದ್ದರೂ ಅವರು ಕ್ರಮ ತೆಗೆದುಕೊಂಡಿಲ್ಲ ಎಂದೂ ಆರೋಪಿಸಲಾಯಿತು. ಮಾಗ್ಗಾದ ಬಿಸಿಯರಿತ ಕಜ್ಜೋಡಿ ಶ್ರೀನಿವಾಸ್. ಇದರ ವಿಚಾರಣೆಗೆ ಶಾಸಕರು ಬೇರೆ ವೇದಿಕೆ ಏರ್ಪಡಿಸಲಿ ಎಂಬುದಾಗಿ ಸಲಹೆ ಮಾಡಿದ್ದನ್ನು ಒಪ್ಪಿ, ವಿಚಾರವನ್ನು ಅರ್ಧಕ್ಕೆ ನಿಲ್ಲಿಸಲಾಯಿತು. ("ಶಾಸಕರು ಅನುಮಾನಪಟ್ಟಂತೆ ಯಾವುದೇ ಅವ್ಯವಹಾರ ನಡೆದಿಲ್ಲ, ಆದರೆ ಕೆಲವು ಕ್ರಮಗಳಲ್ಲಿ ತಪ್ಪು ನಡೆದಿರುವುದು ಸತ್ಯ" ಎಂದು ರೇಂಜರ್ ಮುನಿಸ್ವಾಮಿ ಅನಂತರ ಹೇಳಿದರು.)

"ಚಿಕ್ಕ ತಾಲ್ಲೂಕು : ಫಲವತ್ತಾಗಿಲ್ಲ"

ಪ್ರಮುಖವಾಗಿ ಚರ್ಚೆಗೆ ಬಂದ ಇನ್ನೊಂದು ವಿಚಾರ ತಾ॥ ಸಬ್ ರಿಜಿಸ್ಟ್ರಾರ್ ನಂಜುಂಡ ಸ್ವಾಮಿ ಕುರಿತದ್ದು. ಅವರು ಏನೇನೂ ಕೆಲಸ ಮಾಡದೆ ರೈತರಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ ಎಂದು ಪ್ರಾ. ಸ. ಕೃಷಿ ಮತ್ತು ಗ್ರಾ. ಅ. ಬ್ಯಾಂಕ್ ಅಧ್ಯಕ್ಷ ಕೆ. ಎಂ. ಮಂಜುನಾಥ್ ಆರೋಪಿಸಿ, "ಭೂ ಬ್ಯಾಂಕಿನ ಒಬ್ಬ ನೌಕರನನ್ನು ಖಾಯಂ ಆಗಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕೆಲಸಕ್ಕೆ ನೇಮಿಸಿದ್ದರೂ ನಮ್ಮ ಯಾವ ಕೆಲಸವನ್ನೂ ಮಾಡಿ ಕೊಡದೆ ಉದಾಸೀನ ಮಾಡುತ್ತಿದ್ದಾರೆ. ಜನವರಿ 20ಕ್ಕೆ ಕೊಟ್ಟ ಅರ್ಜಿಗಳಿಗೆ ಮಾ. 5ರಲ್ಲಿ ಹಿಂಬರಹ ಕೊಟ್ಟಿದ್ದಾರೆ. ಇವರುಗಳ ದೆಸೆಯಿಂದ ರೈತರಿಗೆ ಸಾಲವಿತರಣೆಗೆ ತೊಂದರೆಯಾಗಿದೆ ಈ ಸಬ್ ರಿಜಿಸ್ಟ್ರಾರ್‌ಗೆ ಈ ತಾಲ್ಲೂಕು ಬಹಳ ಸಣ್ಣದಾಯಿತಂತೆ. ದೂರು ಬರಲಿ ಎಂದೇ ಹೀಗೆ ಕಿರುಕುಳ ಕೊಡುತ್ತಿದ್ದಾರಂತೆ. ಆದ್ದರಿಂದ ಅವರನ್ನು ಎಲ್ಲಿಗೆ ಬೇಕೋ ಅಲ್ಲಿಗೆ "ಫಲವತ್ತಾದ" ಕಡೆಗೆ ವರ್ಗ ಮಾಡಿಸಿ ರೈತರ ಕಿರುಕುಳ ತಪ್ಪಿಸಿ ಎಂದು ಆಗ್ರಹಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಗಳೊಡನೆ ಚರ್ಚಿಸುವುದಾಗಿ ಶಾಸಕರ ಭರವಸೆ ದೊರೆಯಿತು.

ಸ್ತುತ್ಯ ಕಾರ್ಯಕ್ರಮ

(4ನೇ ಪುಟದಿಂದ)

ಮತ್ತು ರಾಜಕಾರಣಿಗಳ ಬಗ್ಗೆ ನಮ್ಮ ಜನ ತಳೆದಿರುವ ಜಿಗುಪ್ಸೆಯನ್ನೂ ಸೂಚಿಸುತ್ತದೆ ಎನ್ನಬಹುದೇನೋ. ಜೊತೆಗೆ ಇದರಲ್ಲಿ ಜಾತಿ-ಮತ-ಭೇದವಿಲ್ಲದೆ ಎಲ್ಲರೂ ಪಾಲ್ಗೊಂಡಿರುವುದು ಇನ್ನೊಂದು ವೈಶಿಷ್ಟ್ಯ.

ಹಲವಾರು ಸಮಸ್ಯೆಗಳು, ದೌರ್ಜನ್ಯಗಳಿಂದ ತತ್ತರಿಸಿರುವ ಜಯಪುರಕ್ಕೆ ಈ ವೇದಿಕೆ ಒಂದು ಸಂಜೀವಿನಿಯಾಗಿ ನಾಗರಿಕರು ನಿರಾಳವಾಗಿ ಉಸಿರಾಡುವಂತಾದರೆ ವೇದಿಕೆಯ ಹುಟ್ಟು ಸಾರ್ಥಕವಾದಂತೆ. ●

ಟಿ. ಎ. ಪಿ. ಸಿ. ಎಂ. ಎಸ್.ಗೆ ನೂತನ ಅಧ್ಯಕ್ಷರು

ಶೃಂಗೇರಿ: ಇಲ್ಲಿನ ಟಿ. ಎ. ಪಿ. ಸಿ. ಎಂ ಎಸ್. ಅಧ್ಯಕ್ಷ ಗಾದಿಗೆ ಜಿ.ಎಂ. ಸುರೇಂದ್ರ ರಾಜೀನಾಮೆ ನೀಡಿದ್ದು, ಸಂಘದ ನಿರ್ದೇಶಕರಾಗಿದ್ದ ಬೇಸೂರು ಶಿವಣ್ಣಹೆಗ್ಡೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ

ಈಚೆಗೆ ಬಹಳಷ್ಟು ಸುಧಾರಿಸಿದ್ದ ಸಂಘದ ಕಾರ್ಯಭಾರ ನೂತನ ಅಧ್ಯಕ್ಷರ ಅವಧಿಯಲ್ಲಿ ಇನ್ನಷ್ಟು ಉತ್ತಮಗೊಳ್ಳಲೆಂದು ಸದಸ್ಯರು ಅಪೇಕ್ಷಿಸಿದ್ದಾರೆ.

ಸಾಮಾಜಿಕ ಪಿಡುಗುಗಳು, ಅವುಗಳ ನಿವಾರಣೆ ಕುರಿತು

ಕೊಪ್ಪದಲ್ಲಿ ಉತ್ತಮ ವಿಚಾರ ಸಂಕಿರಣ

ಕೊಪ್ಪ : ಸಾಮಾಜಿಕ ಪಿಡುಗುಗಳು ಮತ್ತು ಅವುಗಳ ನಿವಾರಣೆ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆಶ್ರಯದಲ್ಲಿ 1 ದಿನದ ವಿಚಾರ ಸಂಕಿರಣ ಇಲ್ಲಿ ಮಾ. 9ರಂದು ನಡೆಯಿತು. ಕೆ. ವಿ. ಮಂಜುನಾಥಶೆಟ್ಟರ ಅಧ್ಯಕ್ಷತೆಯಲ್ಲಿ ಶಾಸಕ ಯು.ಕೆ. ಶಾಮಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಬಿ. ಜಿ. ಚಿದಂಬರ್, ಜಿ. ಡಿ. ಪರಮೇಶ್ವರ, ಬಿ.ಡಿ.ಒ. ರಾಮಮೂರ್ತಿ ಮುಖ್ಯ ಅತಿಥಿಗಳಾಗಿದ್ದರು.

ಅನಂತರ ನಡೆದ ವಿಚಾರ ಸಂಕಿರಣದಲ್ಲಿ ಹೆಣ್ಣು ಮಕ್ಕಳ ಶೋಷಣೆ ಕುರಿತು ಬಿ.ಡಿ.ಒ. ರಾಮಮೂರ್ತಿ. ಮಹಿಳಾ ಅನಕ್ಷರತೆ ಕುರಿತು ನ ರಾ. ಪುರ ಬಿ ಡಿ. ಒ ಚಿದಾನಂದ್ ಹೆಗ್ಡಾರ್, ಮದ್ಯಪಾನ ಮತ್ತು ಮಾದಕ ದ್ರವ್ಯಗಳ ಪಿಡುಗು ಕುರಿತು ಎ. ಟಿ. ಚಾಮರಾಜ್ ಮಾತನಾಡಿದರು. ವರದಕ್ಷಿಣೆ ನಿರ್ಮೂಲನ ಕುರಿತು ಇದಕ್ಕೆ ಮೊದಲು ಶಾಸಕ ಶಾಮಣ್ಣ ಅವರೇ ತಮ್ಮ ಭಾಷಣದಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದರು.

'ಮಹಿಳಾ ಶೋಷಣೆ ಮತ್ತು ಕಾನೂನು' ಕುರಿತು ನ. ರಾ. ಪುರದ ವಕೀಲರಾದ ಶ್ರೀಮತಿ ಶಶಿಕಲಾ ಉರಣ್ಕರ್ ಅವರು ಸವಿಸ್ತಾರವಾಗಿ ವಿವರಿಸಿದರು. ಈ ವಿಚಾರದ

ಆಳವಾದ ತಿಳುವಳಿಕೆ, ಅಧ್ಯಯನ ಮತ್ತು ಆಲೋಚನೆಗಳಿಂದ ಕೂಡಿದ್ದ ಅವರ ಮಾತುಗಳು ವಿಚಾರ ಸಂಕಿರಣದಲ್ಲಿ ಮೂರೂ ತಾ||ಗಳಿಂದ ಸುಮಾರು 200ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ವಿವಿಧ ಮಹಿಳಾ ಮಂಡಳಿಗಳ ಪ್ರತಿನಿಧಿಗಳು ಹಾಗೂ ಸಾಮಾನ್ಯ ಮಹಿಳೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಗಾಢವಾದ ಪ್ರಭಾವ ಬೀರಿದವು. ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು.

ಕವನಗಳಿಗೆ ಆಹ್ವಾನ

ತೀರ್ಥಹಳ್ಳಿ : ಈ ತಾಲ್ಲೂಕಿನ ಬಸವಾನಿಯ ಉದಯ ಪ್ರಕಾಶನ ಸದ್ಯದಲ್ಲೇ ಪ್ರಕಟಿಸಲಿರುವ 'ಭಾವ ತರಂಗ' ಕವನ ಸಂಕಲನಕ್ಕೆ ಯುವ ಕವಿಗಳಿಂದ ಕವನಗಳನ್ನು ಆಹ್ವಾನಿಸಲಾಗಿದೆ. ಜೊತೆಯಲ್ಲಿ ಪ್ರವೇಶ ಪತ್ರಕ್ಕಾಗಿ 1 ರೂ. ಸ್ಟ್ಯಾಂಪ್ ಲಗತ್ತಿಸಬೇಕು.

"ಕೊಪ್ಪ ಎಸ್ಟೇಟ್ ಮಾರ್ಗದಲ್ಲಿ ಕೆಲವಾದರೂ ಬಸ್‌ಗಳ ಓಡಾಟ ಬೇಕೇ ಬೇಕು"

ಓದುಗರ ಪತ್ರ

ಪ್ರಿಯರೆ,

ತಾ|| 18-3-90ರ ನಿಮ್ಮ ಸಂಚಿಕೆಯಲ್ಲಿ ವಸಂತ ಕುಮಾರ್ ಹರ್ಡೀಕರ್ ಅವರು, ಕೊಪ್ಪ ಎಸ್ಟೇಟ್ ಮಾರ್ಗವಾಗಿ ಬಸ್‌ಗಳನ್ನು ಓಡಿಸುವುದನ್ನು ವಿರೋಧಿಸಿದ್ದಾರೆ.

ಆದರೆ ಈ ಪ್ರದೇಶದಲ್ಲೂ ವಿಪುಲವಾದ ಜನವಸತಿಯಿದೆ. ರಾಘವೇಂದ್ರ ನಗರವೊಂದರಲ್ಲೇ ಸುಮಾರು 400 ಮನೆಗಳಿವೆ. ಅಲ್ಲದೆ ಕೊಪ್ಪ ಎಸ್ಟೇಟ್ ಕಾರ್ಮಿಕರು, ಕೆಳಸೇಟಿಯವರು ಹಾಗೂ ಈ ಭಾಗದ ಹಲವು ರೈತರು ಮತ್ತು ರೈತ ಕಾರ್ಮಿಕರು ಮುಂತಾದ ಸಾವಿರಾರು ಜನರಿಗಾಗಿ ಈ ಮಾರ್ಗದಲ್ಲೂ ಬಸ್ ಸೌಕರ್ಯದ ಅಗತ್ಯವಿದೆ. ಅಂದ ಮಾತ್ರಕ್ಕೆ, ಎಲ್ಲಾ ಬಸ್‌ಗಳನ್ನೂ ಇಲ್ಲೇ ಓಡಿಸಲಿ ಎಂಬುದೇನೂ ನಮ್ಮ ಬೇಡಿಕೆಯಲ್ಲ. ಆದರೆ ಕೆಲವಾದರೂ ಬಸ್‌ಗಳನ್ನು ಓಡಿಸುವುದೂ ಬೇಡವೆಂದರೆ ಅದಕ್ಕೆ ಅರ್ಥವಿಲ್ಲ.

ಈ ರಸ್ತೆಯಲ್ಲಿರುವ ಮುಸುರಿಹಳ್ಳದ ಸೇತುವೆ ಅವರು ತಿಳಿಸಿರುವಂತೆ ಪ್ರಾಣಾಪಾಯಕರವಾಗಿ ಜೀರ್ಣಾವಸ್ಥೆಯಲ್ಲೇನೂ ಇರುವುದು ಕಾಣುವುದಿಲ್ಲ. ಈಗಲೂ ಈ ಮಾರ್ಗದಲ್ಲಿ ಸರ್ಕಾರಿ ಬಸ್‌ಗಳು ಮತ್ತು ಲಾರಿ ಮುಂತಾದ ದೊಡ್ಡ ವಾಹನಗಳು ಸಂಚರಿಸುತ್ತಿಲ್ಲವೇನು ? ಮುಸುರಿಹಳ್ಳದಿಂದ ಬಾಳಗಡಿ ಜಂಕ್ಷನ್‌ವರೆಗೂ ಈಚೆಗೆ ರಸ್ತೆಯನ್ನು ಅಗಲ ಮಾಡಿ ಟಾರ್ ಹಾಕಲಾಗಿದೆ. (ಒಳ್ಳೇ ಹೆದ್ದಾರಿಯಂತೆ ಕಾಣುತ್ತಿದೆ.) ಇದು ವಾಹನಗಳ ಸಂಚಾರಕ್ಕೆ ಅಯೋಗ್ಯವಾದ ಅಥವಾ ಅನುಪಯುಕ್ತ ಮಾರ್ಗವಾದಗೆ ಅಷ್ಟೆಲ್ಲ ಖರ್ಚು ಮಾಡಿ ರಸ್ತೆ ಅಭಿವೃದ್ಧಿಪಡಿಸುವ ಅಗತ್ಯವೇನಿತ್ತು ?

ಆದ್ದರಿಂದ, ದಿನದ ಎಲ್ಲಾ ವೇಳೆಯಲ್ಲೂ ಒಂದೊಂದಾದರೂ ಬಸ್‌ಗಳನ್ನು ಈ ಮಾರ್ಗದಲ್ಲಿ ಓಡಿಸಲೇ ಬೇಕೆಂದು ಸಂಬಂಧಪಟ್ಟವರಲ್ಲಿ ಆಗ್ರಹಿಸುತ್ತೇವೆ.

—ಬಿ. ಎಸ್. ಉದಯಕುಮಾರ್
ಮತ್ತು ಮಿತ್ರರು, ಕೊಪ್ಪ.

ಸಾಹಸಿ, ನಿಸರ್ಗ ಪ್ರಿಯರಿಗೆ ಸ್ಮರಣೀಯ ಅನುಭವ ನೀಡಿದ

"ಮೇರ್ತಿ ಗುಡ್ಡ ಏರುವ ಸ್ಪರ್ಧೆ"

ಕೊಪ್ಪ, ಶೃಂಗೇರಿ ತಾಲ್ಲೂಕಿನಾದ್ಯಂತದ ಹಾಗೂ ಬಾಳೆಹೊನ್ನೂರು ಸುತ್ತಮುತ್ತಲಿನ ಯಾವುದೇ ಎತ್ತರದ ಪ್ರದೇಶದಿಂದ ನೋಡಿದರೂ ತ್ರಿಕೋಣಾಕಾರದಲ್ಲಿ ಬೃಹತ್ತಾಗಿ ತಲೆ ಎತ್ತಿ ನಿಂತಿರುವ ಮೇರ್ತಿ ಗುಡ್ಡ ನಿಸರ್ಗ ಪ್ರಿಯರಿಗೆಲ್ಲ ಒಂದು ಚಿರಂತನ, ಅದ್ಭುತ, ವಿಸ್ಮಯದ ನಿಸರ್ಗ ಸೃಷ್ಟಿ.

ಬಸರೀಕಟ್ಟೆಗೆ ಸಮೀಪವಿರುವ ಈ ಪರ್ವತವನ್ನು, ದೂರದಿಂದ ನೋಡಿದ ಯಾವನೇ ಸಾಹಸಿಯಾಗಲಿ, ನಿಸರ್ಗ ಪ್ರೇಮಿಯಾಗಲಿ, ಒಮ್ಮೆಯಾದರೂ ಅದರ ತುದಿಯಲ್ಲಿ ನಿಂತು ಸುತ್ತಲಿನ ಪ್ರಕೃತಿ ವೈಭವವನ್ನು ಸವಿಯಲೇ ಬೇಕು ಎಂದು ಕನಸು ಕಾಣದೆ ಇರಲಾರ. ಅಂಥ ಸಾಹಸಿ-ಸಹೃದಯರಿಗೆಲ್ಲ ಒಂದು ಸ್ಮರಣೀಯ ಅನುಭವ ಒದಗಿಸಿಕೊಟ್ಟಂಥ 'ಮೇರ್ತಿಗುಡ್ಡ ಏರುವ ಸ್ಪರ್ಧೆ' ಮಾ. 18ರಂದು ಬಸರೀಕಟ್ಟೆ ಸಿಂಡಿಕೇಟ್ ಬ್ಯಾಂಕ್ ಮನರಂಜನಾ ಕೂಟದವರಿಂದ ನಡೆಯಿತು.

ದೂರದ ಚಿಕ್ಕಮಗಳೂರು, ಕೊಪ್ಪಗಳಿಂದಲೂ ಸೇರಿದಂತೆ 19 ಜನ ಸ್ಪರ್ಧಿಗಳು ಭಾಗವಹಿಸಿದ್ದ ಈ ಸ್ಪರ್ಧೆ ಬ್ಯಾಂಕ್ ಎದುರಿನಿಂದ ಮಧ್ಯಾಹ್ನ 2-30ಕ್ಕೆ ಆರಂಭವಾಯಿತು. ನಿರ್ದಿಷ್ಟ ಮಾರ್ಗದಲ್ಲಿ 4 'ಚೆಕ್ ಪಾಯಿಂಟ್'ಗಳನ್ನು ಹಾದು, ಮೇರ್ತಿಖಾನ್ ಮೂಲಕ ಬದನೆಖಾನ್ ತಿರುವಿಗೆ ತಲುಪಿ ನೇರವಾಗಿ ಗುಡ್ಡ ಏರಬೇಕಿತ್ತು 18 ಜನರು ಗುರಿ ಮುಟ್ಟಿದರು. ಸಮಯದ ಕೊರತೆಯ ಕಾರಣ ಒಬ್ಬರು ಮಾತ್ರ ಬದನೆಖಾನ್ ತಿರುವಿನಲ್ಲಿ ಸ್ಪರ್ಧೆಯಿಂದ ನಿವೃತ್ತರಾದರು.

ಸಮುದ್ರ ಮಟ್ಟದಿಂದ ಸುಮಾರು 5,500 ಅಡಿ ಎತ್ತರವಿರುವ ಮೇರ್ತಿ ಗುಡ್ಡ ಬಸರೀಕಟ್ಟೆಯಿಂದ 1980 ಅಡಿ ಎತ್ತರದಲ್ಲಿದೆ. ನಿಗದಿತ ಮಾರ್ಗದಲ್ಲಿ ಸುಮಾರು ನಾಲ್ಕು-ನಾಲ್ಕೂವರೆ ಕಿ.ಮೀ. ದೂರವಾಗುತ್ತದೆ. ಇದನ್ನು ಕೇವಲ 43 ನಿಮಿಷಗಳಲ್ಲಿ ಏರಿದ ಬದನೆಖಾನ್ ತೋಟದ ಕಾರ್ಮಿಕ ರಾಮಜಯ ಮೊದಲ ಬಹುಮಾನ ಗೆದ್ದರು. ಇವರು ಈ ಸುತ್ತಮುತ್ತ ಇಂಥ ಸ್ಪರ್ಧೆಗಳಲ್ಲಿ ಒಂದು ದಂತ ಕಥೆಯೇ ಆಗಿ ಹೋಗಿದ್ದಾರೆ. "ಅವನಿಗೆ ದಣಿವೆಂಬುದೇ ಇಲ್ಲ" ಎಂದು ಸುತ್ತಲಿನ ಯುವಕರು ಅರ್ಧ ಮೆಚ್ಚುಗೆ - ಅರ್ಧ ಅಸೂಯೆ ಬೆರೆಸಿ ಹೊಗಳುತ್ತಾರೆ.

ಸದ್ಗುರು ಪ್ರೌಢಶಾಲೆಯ ವಿದ್ಯಾರ್ಥಿ ದೇಜಪ್ಪ 2ನೇ ಸ್ಥಾನವನ್ನೂ, ಮೇರ್ತಿಖಾನ್

(7ನೇ ಪುಟಕ್ಕೆ)

ಹಳ್ಳಿಗಾಡಿನ ಮುಗಿಯದ ಸಮಸ್ಯೆಗಳು, ಸಮಸ್ಯೆಗಳು....

(5ನೇ ಪುಟದಿಂದ)

ಏರೆ ಭೂಮಿಗೆ ಕಲ್ಲುಮುಂಡು-ತಂತಿ ಬೇಲಿ ಲಗಾಯಿಸಿದ್ದಾರಂತೆ ಈ ಸರ್ವೆಯರ್ ಸರ್ವಾಧಿಕಾರಿ. ಈತನ ಆಕ್ರಮಣ, ದಬ್ಬಾಳಿಕೆ ವಿರುದ್ಧ ಈ ಬಡವರು ಸತತವಾಗಿ ಹೋರಾಡುತ್ತಿದ್ದರೂ ಪ್ರಯೋಜನವಾಗಿಲ್ಲವಂತೆ.

‡ ‡ ‡

ಹರಿಹರಪುರ-ಮೇಲುಬಿಳ್ರಿ-ಬಿಲಗದ್ದೆ ಮಾರ್ಗದಲ್ಲಿ ಬಸ್ ಬೇಕು

ಕೊಪ್ಪ ತಾಲ್ಲೂಕಿನ ಮೇಲ್ಕಂಡ ಮಾರ್ಗದಲ್ಲಿ ಶೃಂಗೇರಿಗಾಗಲಿ, ಶಾನುವಳ್ಳಿ ಅಥವಾ ಕಮ್ಮರಡಿಗಾಗಲಿ ಬಸ್ ಓಡಿಸುವಂತೆ ಹಳ್ಳಿಗರು ಒತ್ತಾಯಿಸುತ್ತಿದ್ದಾರೆ. ಈ ಮಾರ್ಗದಲ್ಲಿ ಹರಿಹರಪುರ-ಮೇಲುಬಿಳ್ರಿ ಮಧ್ಯೆ ಎರಡೂವರೆ ಕಿ. ಮೀ. ಟಾರ್ ಕೂಡ ಆಗಿದೆ. ಅಡ್ಡಗದ್ದೆ-ಬಿಲಗದ್ದೆ-ಶಾನುವಳ್ಳಿ ಮಾರ್ಗದಲ್ಲಿ ಈಗಾಗಲೇ ಬಸ್ ಸಂಚಾರ ಕೂಡ ಇದೆ ಈಗ ಮೇಲ್ಕಂಡ ಮಾರ್ಗವನ್ನೂ ಸಂಪರ್ಕಿಸಿದರೆ, ಯಾವುದೇ ಸಂಚಾರ ಸಂಪರ್ಕವಿಲ್ಲದ ಹತ್ತಾರು ಹಳ್ಳಿಗಳಿಗೆ ಮಹದುಪಕಾರವಾಗುತ್ತದೆ ಎನ್ನುತ್ತಾರೆ ಹಳ್ಳಿಯ ಜನತೆ.

* * * *

ಕೂಗ್ರೆ-ಹೆಗ್ಗಾರುಕುಡಿಗೆ ರಸ್ತೆಗೆ ಬಸ್ ಬೇಕು

ಕೊಪ್ಪ ತಾಲ್ಲೂಕಿನ ಶಾಂತಿಗ್ರಾಮದಿಂದ ಹೆಗ್ಗಾರುಕುಡಿಗೆ ಮಧ್ಯೆ ಲೋಕೋಪಯೋಗಿ ಇಲಾಖೆ ರಸ್ತೆ ಇದ್ದು, ಈ ಮಾರ್ಗದಲ್ಲಿ ಶಂಕರ್ ಕಂಪೆನಿಯ ಶೃಂಗೇರಿ-ಹೊರನಾಡು ಬಸ್ಸಿಗೆ ಪರ್ಮಿಟ್ ಆಗಿದೆಯೆಂದು ಹೇಳಲಾಗುತ್ತಿದೆ. ಆದರೆ ಈ ರಸ್ತೆ ಕೋಟೆತೋಟ, ನಂದೊಳ್ಳಿ ಮತ್ತು ಅರಿಹಳ್ಳದ ಒಳಿ ಬಹಳ ಹಾಳಾಗಿದ್ದು, ಈವರೆಗೂ ಯಾವುದೇ ಬಸ್ ಓಡಾಡುತ್ತಿಲ್ಲ.

ಸಂಬಂಧಪಟ್ಟವರು ಕೂಡಲೇ ಈ ರಸ್ತೆಯನ್ನೂ ರಿಪೇರಿ ಮಾಡಿಸುವುದಲ್ಲದೆ, ಈ ಮಾರ್ಗದಲ್ಲಿ ಕೆಲವಾದರೂ ಬಸ್ ಓಡಿಸಲು (ಒತ್ತಾಯಪೂರ್ವಕವಾದರೂ ಸರಿ) ಪರ್ಮಿಟ್ ನೀಡಿ, ಈ ಒಳನಾಡಿನ ಹತ್ತಾರು ಹಳ್ಳಿಗಳಿಗೆ ಅನುಕೂಲ ಕಲ್ಪಿಸಬೇಕೆಂದು 3-4 ಹಳ್ಳಿಗಳಿಗೆ ಹೋದಾಗಲೂ ಹಳ್ಳಿಗರು ಆಗ್ರಹಿಸುವುದು ಕಂಡು ಬಂತು.

ರಸ್ತೆಯನ್ನು ಹಳ್ಳ ನುಂಗಿತ್ತ ....

'ಕೋಡಗನ ಕೋಳಿ ನುಂಗಿತ್ತಾ ....' ಎಂದು ಮಹಾತ್ಮ ಶರೀಫ ಹಾಡಿದಂತೆ, ಹಲವಾರು ಕಡೆ ಹಳ್ಳಗಳೂ, ಗುಡ್ಡದ ನೀರೂ ರಸ್ತೆಗಳನ್ನೇ ನುಂಗಿ ಹಾಕುತ್ತಿವೆ. ಇಂಥ ಒಂದು ಭೂ ಕೊರೆತ ದಯಂಬಳ್ಳಿಯಲ್ಲೂ ತೀವ್ರಗತಿಯಲ್ಲಿ ನಡೆಯುತ್ತಿದೆ.

ಬೆಳವಿನಕೊಡಿಗೆ ಕಡೆಯಿಂದ ಎತ್ತಿನಹಟ್ಟಿಗೆ ಪ್ರವೇಶಿಸುವಲ್ಲಿರುವ ಹಳ್ಳ ರಸ್ತೆಯ ಬಲ ಭಾಗದಲ್ಲಿ ತೀವ್ರವಾಗಿ ಕೊರೆದು ನುಗ್ಗುತ್ತಿದೆ. ಕೇವಲ ಕಳೆದ ಒಂದೆರಡು ವರ್ಷಗಳಲ್ಲೇ ಸುಮಾರು ಒಂದು ನೂರು ಅಡಿಯಷ್ಟು ಉದ್ದಕ್ಕೆ ಧರೆ ಕುಸಿದು, 50-60 ಅಡಿಗಳಷ್ಟೆತ್ತರದ ಪ್ರಪಾತವುಂಟಾಗಿದೆ. ರಸ್ತೆಗೆ ಇನ್ನು ಕೇವಲ 10-12 ಅಡಿ ಮಾತ್ರ ಉಳಿದಿದೆ. ಹಳ್ಳ ಮನಸ್ಸು ಮಾಡಿದರೆ ಅಷ್ಟನ್ನು ನುಂಗಲು ಒಂದು ಮಳೆಗಾಲ ಸಾಕು.

ಸಂಬಂಧಿಸಿದವರು ಹೆಗ್ಗಾರುಕುಡಿಗೆಯಲ್ಲಿ ರಿಪೇರಿ ಮಾಡಲಾರದಷ್ಟು ರಸ್ತೆಯ ವರೆಗೂ ಕುಸಿದ ಮೇಲೆ ಮಣ್ಣು ಹುಯ್ದಂತೆ ಇಲ್ಲೂ ಮಾಡದೆ, ಈಗಲೇ ಕೊರೆತಕ್ಕೆ ತಡೆ ಒಡ್ಡುವುದು ಸಾಧ್ಯ; ಹಾಗೆ ಈಗಲೇ ಮಾಡಿದರೆ ಮಾತ್ರ ಈ ರಸ್ತೆ ಉಳಿಯುತ್ತದೆ. ಇಲ್ಲವಾದರೆ ಇಷ್ಟೊಂದು ಉಪಯುಕ್ತವಾದ ರಸ್ತೆ ಎಲ್ಲರ ಕಣ್ಣೆದುರೇ ಕರಗಿ ಹೋಗುತ್ತದೆ.

ಶೃಂಗೇರಿ ಕ್ಷೇತ್ರ ಮುಸ್ಲಿಂ ಸಮ್ಮೇಳನ

ಕೊಪ್ಪ : ಶೃಂಗೇರಿ ಕ್ಷೇತ್ರ ಮಟ್ಟದ ಮುಸ್ಲಿಂ ಸಮ್ಮೇಳನ ಮಾ. 8 ರಂದು ಕುದುರೆಗುಂಡಿಯಲ್ಲಿ ವಕ್ಫ್ ನೂತನ ಅಧ್ಯಕ್ಷ ಅಬ್ದುಲ್ ಸಮದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕ್ಷೇತ್ರದ ಮುಸ್ಲಿಂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಶಾಸಕ ಯು.ಕೆ. ಶಾಮಣ್ಣ, (ಚಿಕ್ಕಮಗಳೂರು ಶಾಸಕ ಸಗೀರ್ ಅಹಮದ್, ಬಿ. ಜಿ. ಚಿದಂಬರ್, ವಸಂತ ಅಜಿಲರು, ವಿಜಯ ಅಜಿಲರು, ಶರೀಫ್ ಸಾಬ್ ಇವರುಗಳು ಭಾಗವಹಿಸಿದ್ದರು

ಕ್ಷೇತ್ರದ ಮೂರೂ ತಾ|| ಗಳ ಎಲ್ಲಾ ಮಸೀದಿ, ಮದರಸಾ ಮತ್ತು ದರ್ಗಾಗಳಿಗೆ ಹಾಗೂ ಹಲವಾರು ಹಳೆಯ ಮತ್ತು ಹೊಸ ಸ್ಮಶಾನ (ಕಬ್ರ ಸ್ಥಾನ) ಗಳಿಗೆ ಅವುಗಳ ಜಾಗ ಮಂಜೂರಾತಿಯ ಹಕ್ಕು ಪತ್ರಗಳು ಸಿಗದೆ ಉಂಟಾಗಿರುವ ತೊಂದರೆಯನ್ನು ಬಗೆಹರಿಸಲು ಶಾಸಕರನ್ನು ಕೋರಲಾಯಿತು.

ಹಿಂದೆ ಎ.ಆರ್. ಇ. ಪಿ. ಯೋಜನೆಯಲ್ಲಿ ನೀಡುತ್ತಿದ್ದಂತೆ, ಮಸೀದಿ ಮುಂತಾದವುಗಳಿಗೆ ಕಾಂಪೌಂಡ್ ಕಟ್ಟಿಸಿಕೊಳ್ಳುವುದಕ್ಕೆ ಜವಾಹರ್ ರೋಜ್‌ಗಾರ್ ಯೋಜನೆಯಲ್ಲೂ ಸಹಾಯ ಧನ ನೀಡಬೇಕು ಹಾಗೂ ಕಾಗದದಲ್ಲೇ ಉಳಿದಿರುವ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಸಾಲ ಸೌಲಭ್ಯಗಳು ಗ್ರಾಮಾಂತರದ ಜನರಿಗೆ ಸಿಗುವಂತೆ ಮಾಡಬೇಕೆಂದೂ ವಿನಂತಿಸಲಾಯಿತು.

ಈ ಹಿಂದೆ ಲಕ್ಷಾಂತರ ರೂ. ವೆಚ್ಚ ಮಾಡಿ ನಿಯಮಿಸಿದ್ದ ಅಲ್ಪ ಸಂಖ್ಯಾತರ ಆಯೋಗಗಳು ಮಂಡಿಸಿರುವ ಹಲವಾರು ಶಿಫಾರಸುಗಳು ಇನ್ನೂ ಜಾರಿಗೆ ಬರದೇ ಇದ್ದು, ಕೂಡಲೇ ಅವುಗಳನ್ನು ಪ್ರಕಟಿಸಿ, ಅವುಗಳಲ್ಲಿ ಕೆಲವನ್ನಾದರೂ ಜಾರಿಗೆ ತರುವಂತೆ ಸಮ್ಮೇಳನ ಸರ್ಕಾರಕ್ಕೆ ಆಗ್ರಹಿಸಿತು.

ಅಲ್ಪ ಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಗಾಗಿ ಜಿಲ್ಲೆಗೊಂದಾದರೂ ವಸತಿ ಪ್ರೌಢ ಶಾಲೆ ಹಾಗೂ ಕಾಲೇಜ್‌ಗಳನ್ನು ಸ್ಥಾಪಿಸುವಂತೆಯೂ, ಆರ್ಥಿಕ ಅಭಿವೃದ್ಧಿಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರೋತ್ಸಾಹ, ಧನ ಸಹಾಯ ನೀಡಬೇಕೆಂದೂ ಸರ್ಕಾರಕ್ಕೆ ಮನವಿ ಮಾಡಲಾಯಿತು.

ಪ್ರವಾಸಾನುಭವ ಕುರಿತು ಭಾಷಣ

ಜಯಪುರ : ಕೊಪ್ಪದ ಕಿರಿಯ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀನಿವಾಸ್ ಅವರು ಮಾ. 6 ರಂದು ಇಲ್ಲಿನ ಪ್ರೌಢ ಶಾಲಾ ವಿದ್ಯಾರ್ಥಿಗಳನ್ನುದ್ದೇಶಿಸಿ, ತಮ್ಮ ಪ್ರವಾಸಾನುಭವಗಳನ್ನು ಕುರಿತು ಭಾಷಣ ಮಾಡಿದರು. ಪ್ರವಾಸಿಗಳು ಚಾರಿತ್ರಿಕ, ಪ್ರಾಕೃತಿಕ ಹಾಗೂ ಕಲಾತ್ಮಕ ಅಂಶಗಳನ್ನು ಗ್ರಹಿಸುವ ದೃಷ್ಟಿಕೋನದ ಬಗೆಯನ್ನು ವಿಷದವಾಗಿ ವಿವರಿಸಿ, ಪ್ರವಾಸದ ಬಗ್ಗೆ ವಿದ್ಯಾರ್ಥಿಗಳಲ್ಲಿರುವ ಕುತೂಹಲಕ್ಕೆ ಪುಟ ಕೊಟ್ಟರು.

ಹಿರಿಯ ಅಧ್ಯಾಪಕ ಅಶ್ವತ್ಥನಾರಾಯಣ ಶ್ರೀನಿವಾಸ್‌ರನ್ನು ಅಭಿನಂದಿಸಿದರು.

(ವರದಿ : ಶಂ ನ. ಶೇಷಗಿರಿ)

ರಾಜ್ಯ ಸಭೆಗೆ ತಾರಾದೇವಿ

ಚಿಕ್ಕಮಗಳೂರು: ಲೋಕಸಭೆಯ ಮಾಜಿ ಸದಸ್ಯೆ ಡಿ.ಕೆ. ತಾರಾದೇವಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಾಜ್ಯ ವಿಧಾನ ಸಭೆಯ ನಾಯಕ ಡಿ. ಬಿ. ಚಂದ್ರೇಗೌಡರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ತಾರಾದೇವಿ ಆಯ್ಕೆಯಾಗಿದ್ದಾರೆ

"ಮೇರ್ತಿಗುಡ್ಡ ಏರುವ ಸ್ಪರ್ಧೆ"

(6ನೇ ಪುಟದಿಂದ)

ತೋಟದ ಕಾರ್ಮಿಕ ಶಂಕರ್ 3ನೇ ಸ್ಥಾನವನ್ನೂ ಗಳಿಸಿದರು. ಶಿವಮೊಗ್ಗದ ಯುವತಿ ...ಅವರೂ ಗುರಿ ಮುಟ್ಟಿದವರಲ್ಲಿದ್ದರು. ಕೊಪ್ಪದ ಪುಟ್ಟ ಬಾಲಕಿ 8 ವರ್ಷದ ಮಲ್ಲಿಗೆ ಎಲ್ಲರೊಂದಿಗೆ ಬೆಟ್ಟ ಏರಿ ಸ್ವಲ್ಪವೂ ದಣಿವು ತೋರಿಸದೆ, ಪುಟಿಯುತ್ತ ಗುಡ್ಡ ಇಳಿದು ಎಲ್ಲರಿಂದಲೂ ಮೆಚ್ಚುಗೆಯ ಮಳೆಗರೆಯಿಸಿಕೊಂಡಳು.

ಸಂಜೆ ಬಸರೀಕಟ್ಟೆ ಅಂಚೆ ಕಛೇರಿಯ ಪೋಸ್ಟ್ ಮಾಸ್ಟರ್ ನಾಗಪ್ಪ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಬಹುಮಾನ ವಿತರಣೆಯ ಸರಳ ಸಮಾರಂಭದಲ್ಲಿ. ಊರಿನ ಹಿರಿಯರಾದ ಎ. ಎಂ. ಡಿಸೋಜರು ಬಹುಮಾನ ವಿತರಿಸಿದರು. ಮೊದಲ 3 ಬಹುಮಾನಗಳನ್ನು ಗುಡ್ಡೇತೋಟದ ಕೋಗಾರು ...ಗಾಧರ್-ಕೃಷ್ಣಸ್ವಾಮಿ ಸೋದರರೂ, ...ಸ್ಪರ್ಧಿಗಳಿಗೆ ಪ್ರೋತ್ಸಾಹಕರ ಬಹುಮಾನಗಳನ್ನು ಮೇರ್ತಿಖಾನ್ ತೋ...

ರೂ ನೀಡಿದ್ದರು. ಗುಡ್ಡದಿಂದ ವಾಪಸು ಬರುವ ದಾರಿಯಲ್ಲಿ ಬದನೆಖಾನ್ ತೋಟದವರು ಎಲ್ಲರಿಗೂ ಹೊಟ್ಟೆ ತುಂಬ ತಿಂಡಿ, ಶರ್ಬತ್ ನೀಡಿ ಸತ್ಕರಿಸಿದರು.

ತ್ಯಾಗರಾಜ ರಸ್ತೆ ರಿಪೇರಿಗೆ ಆಗ್ರಹ

ಕೊಪ್ಪ : ಜಿಲ್ಲಾ ಪರಿಷತ್ ಆಡಳಿತಕ್ಕೆ ಸೇರಿರುವ ತ್ಯಾಗರಾಜ ರಸ್ತೆಯಲ್ಲಿ ಮನೆಗಳಿಗೆ ನೀರಿನ ಸಂಪರ್ಕಕ್ಕಾಗಿ ಟಾರು ರಸ್ತೆಯನ್ನು 10-12 ಕಡೆ ಅಗೆದು ಮುಚ್ಚಲಾಗಿದೆ. ಇದರಿಂದ ವಾಹನಗಳ ಓಡಾಟಕ್ಕೆ ಬಹಳ ಅಡಚಣೆಯಾಗುತ್ತಿದೆ. ಕೂಡಲೇ ಈ ರೀತಿಯ ತೋಡುಗಳಿಗೆ ಟಾರು ಹಾಕಿಸಿ ರಸ್ತೆ [illegible] ಮಾಡಬೇಕೆಂದ [illegible] ...ತೆರಿಗೆ ದುರುಪಯೋಗ ... ಹಿತ ...ಗಿ ಜಿ.ಪ. ಅಧ್ಯಕ್ಷರಿಗೆ ದೂರು ಬಂದಲ್ಲಿ ...ದಾಗಿಯೂ ಮಾ. 21ರ ಜಿಲ್ಲಾ ...ರ್ ಗಳು ವರದಿ ಮಾಡಿದ್ದವು.

ಈ ಬಗ್ಗೆ ಡಿ.ಡಿ.ಪಿ.ಐ ಅವರು ತು...

ಸಂಖ್ಯೆ/ಸಿಆರ್‌ಸಿ/ಸಿಆರ್/11/89-90

ತಹಸೀಲ್ದಾರ್‌ರವರ ಕಾರ್ಯಾಲಯ,
ಕೊಪ್ಪ ತಾಲ್ಲೂಕು, ಕೊಪ್ಪ.
ದಿನಾಂಕ : 23-3-1990.

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಮೇಗುಂದಾ ಹೋಬಳಿ ಕಲ್ಲುಗುಡ್ಡೆ ಗ್ರಾಮದ ನೇರಂಕಿಯ ವಾಸಿ ರಾಮಯ್ಯ ಹೆಬ್ಬಾರ್ ಬಿನ್ ಜನಾರ್ದನಯ್ಯ ಎಂಬುವರು ಇದೇ ಕಲ್ಲುಗುಡ್ಡೆ ಗ್ರಾಮದ ಸ. ನಂ 68 ರಲ್ಲಿ 00-01 ಗುಂಟೆ, 69ರಲ್ಲಿ 0-02, 71ರಲ್ಲಿ 0-01, 73ರಲ್ಲಿ 0-02 ಮತ್ತು ಸ. ನಂ. 74 ರಲ್ಲಿ 0-01 ಜುಮ್ಲಾ 0-07 ಗುಂಟೆಗೆ ಸಿಆರ್‌ಸಿ ನಂ: 3249 ದಿನಾಂಕ 30-7-58 ರ ಮೇರೆಗೆ ಮತ್ತು ಸ. ನಂ. 71 ರಲ್ಲಿ 0-09, 72 ರಲ್ಲಿ 0-05 ಹಾಗೂ ಸ. ನಂ. 73 ರಲ್ಲಿ 0-10 ಗುಂಟೆ ಹೀಗೆ ಜುಮ್ಲಾ 0-24 ಗುಂಟೆಗೆ ಸಿಆರ್‌ಸಿ 296/78-79 ಪಡೆದಿದ್ದು, ಸದ್ರಿ ಕಾಫಿ ದೃಢೀಕರಣ ಪತ್ರಗಳು ಕಳೆದು ಹೋಗಿರುವುದಾಗಿಯೂ, ಅವುಗಳನ್ನು ಒಟ್ಟುಗೂಡಿಸಿ, ಈಗ ಹೊಸದಾಗಿ ಕೇಳಿರುವ ವಿಸ್ತೀರ್ಣವನ್ನು ಸೇರಿಸಿ ಸಿಆರ್‌ಸಿ ಯನ್ನು ಕೊಡಬೇಕೆಂದೂ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಮೇಲ್ಕಂಡ ಕಾಫಿ ನೋಂದಣಿ ದೃಢೀಕರಣ ಪತ್ರ ಕೊಡುವಲ್ಲಿ ಯಾರಿಂದಲಾದರೂ ತಕರಾರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳ ಒಳಗೆ ಲಿಖಿತ ಮೂಲಕ ಈ ಕಾರ್ಯಾಲಯಕ್ಕೆ ತಿಳಿಸಲು ಕೋರಲಾಗಿದೆ.

ಕೊಪ್ಪ.
ದಿನಾಂಕ : 23-3-1990

(ಸಹಿ) ತಹಸೀಲ್ದಾರ್,
ಕೊಪ್ಪ ತಾಲ್ಲೂಕ್, ಕೊಪ್ಪ.

'ಮುಂಜಾವು' ಪತ್ರಿಕೆಯ ಮಾಲೀಕತ್ವ ಮತ್ತಿತರ ವಿವರ

ಫಾರಂ ನಂ. IV (ರೂಲ್ 8 ನೋಡಿ)

1.	ಪ್ರಕಟಣೆಯ ಸ್ಥಳ	ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.
2	ಪ್ರಕಟಣೆಯ ಅವಧಿ	ವಾರಕ್ಕೊಮ್ಮೆ
3.	ಭಾಷೆ	ಕನ್ನಡ
4.	ಸಂಪಾದಕ, ಮುದ್ರಕ ಮತ್ತು ಪ್ರಕಾಶಕರ ಹೆಸರು, ರಾಷ್ಟ್ರ, ವಿಳಾಸ	ಸಿರಿಮನೆ ನಾಗರಾಜ್ ಭಾರತೀಯ 1128, ತ್ಯಾಗರಾಜ ರಸ್ತೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
5.	ಪತ್ರಿಕೆಯ ಮಾಲೀಕತ್ವ ಅಥವಾ ಪಾಲುದಾರಿಕೆ	ಪೂರ್ಣ ಮಾಲೀಕತ್ವ : ಸಿರಿಮನೆ ನಾಗರಾಜ್.

ಮೇಲೆ ಕಾಣಿಸಿರುವ ವಿವರಗಳು ನನ್ನ ಗ್ರಹಿಕೆ ಮತ್ತು ವಿಶ್ವಾಸದ ಪ್ರಕಾರ ಸರಿಯಾಗಿವೆಯೆಂದು ಈ ಮೂಲಕ ಹೇಳುತ್ತಿದ್ದೇನೆ.

25-3-1990.

ಸಿರಿಮನೆ ನಾಗರಾಜ್
(ಪ್ರಕಾಶಕರ ಸಹಿ)

ಕೊಪ್ಪದ ಶಟ್ಲ್ ಜೋಡಿಗೆ ಸತತ ಜಯ

ಕೊಪ್ಪ: ಇಲ್ಲಿನ ಖ್ಯಾತ ಶಟ್ಲ್ ಜೋಡಿಯಾದ ಜಹೀರ್ ಅಬ್ಬಾಸ್ ಮತ್ತು ಶೇಖ್ ಅಹಮದ್ ಇವರುಗಳು ಕಳೆದ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಜಿಲ್ಲಾ ಮಟ್ಟದ ಮೂರು ಪ್ರಮುಖ ಶಟ್ಲ್ ಟೂರ್ನಿಗಳಲ್ಲಿ ಜಯ ಗಳಿಸಿದ್ದಾರೆ.

ಫೆ. 2ರಂದು ಜಯಪುರದಲ್ಲಿ ನಡೆದ ದಿ॥ ಕೌಳಿ ಚನ್ನಪ್ಪ ಗೌಡರ ಸ್ಮಾರಕ ಜಿಲ್ಲಾ ಮಟ್ಟದ ಆಹ್ವಾನಿತ ಹೊನಲು ಬೆಳಕಿನ ಟೂರ್ನಿ, ಕೊಪ್ಪದಲ್ಲಿ ಮಾ. 9, 10, 11 ರಂದು ನಡೆದ ಅಂತರ ಜಿಲ್ಲಾ ಆಹ್ವಾನಿತ ಟೂರ್ನಿ, ಮಾ. 15, 16 ಕಾಫಿ ಸಂಶೋಧನಾ ಕೇಂದ್ರದಲ್ಲಿ ನಡೆದ ಜಿಲ್ಲಾ ಮಟ್ಟದ ಆಹ್ವಾನಿತ ಟೂರ್ನಿ—ಇವೇ ಈ ಜೋಡಿ 'ಹ್ಯಾಟ್ರಿಕ್' ರೀತಿಯಲ್ಲಿ ಗೆದ್ದ ಪಂದ್ಯಾವಳಿಗಳು.

ಕೊಪ್ಪದಲ್ಲಿ 'ನೀನಾಸಂ ತಿರುಗಾಟ'ದ ನಾಟಕ 'ತುಘಲಕ್'

ಕೊಪ್ಪ: ಇಲ್ಲಿನ ಬ್ಯಾಂಕ್ ಉದ್ಯೋಗಿಗಳ ಮನರಂಜನಾ ಕೂಟದ ಆಶ್ರಯದಲ್ಲಿ 1-4-90 ರ ಭಾನುವಾರ ರಾತ್ರಿ 7-30 ಕ್ಕೆ ಪುರಸಭಾ ರಂಗ ಮಂದಿರದಲ್ಲಿ (ಜೆ. ಎಂ. ಜೆ. ಟಾಕೀಸ್ ಫಕ್ಕ) ಹೆಗ್ಗೋಡಿನ 'ನೀನಾಸಂ ತಿರುಗಾಟ-1989'ರ 'ತುಘಲಕ್' ನಾಟಕ ಏರ್ಪಟ್ಟಿದೆ. ಪ್ರವೇಶ ಉಚಿತ.

'ಕೂಲಿಗಾಗಿ ಕಾಳು' ಯೋಜನೆಯ

ಅಕ್ರಮ ಅಕ್ಕಿ ದಾಸ್ತಾನು ವಶ

ಸಿಗದಾಳು : ಗ್ರಾಮಸ್ಥರು ಜಿಲ್ಲಾಧಿಕಾರಿಗಳಿಗೆ ನೀಡಿದ ಸುಳಿವಿನ ಮೇಲೆ ಜಿಲ್ಲಾ ನಾಗರಿಕ ಪೂರೈಕೆ ಇನ್‌ಸ್ಪೆಕ್ಟರ್ ಕೃಷ್ಣೇ ಅರಸ್ ಅವರು ಮಾ. 20 ರಂದು ಇಲ್ಲಿನ ಎನ್. ಗೋಪಾಲರಾವ್ ಅವರ ಮನೆಯನ್ನು ಶೋಧಿಸಿ, ಅಕ್ರಮವಾಗಿ ಸಂಗ್ರಹಿಸಿದ್ದ ಸುಮಾರು 22 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಂಡು ಕೊಪ್ಪ ತಾ. ವ್ಯ. ಮಾ. ಸ. ಸಂಘದಲ್ಲಿ ಅಮಾನತು ಪಡಿಸಿದ್ದಾರೆ.

ಅಕ್ಕಿಯನ್ನು ಪರಿಶೀಲಿಸಿದಾಗ ಇದು ಪಡಿತರ ಅಥವಾ ಜೋಜಗಾರ್ (ಕೂಲಿಗಾಗಿ ಕಾಳು) ಅಕ್ಕಿಯೆಂದು ಕಂಡು ಬಂದಿದೆ ಎಂದು ಗೊತ್ತಾಗಿದೆ. ಈ ಅಕ್ಕಿ ತನ್ನದಲ್ಲ, ಹೇಗೆ ಬಂತೆಂಬುದು ಗೊತ್ತಿಲ್ಲ ಎಂದು ಗೋಪಾಲರಾವ್ ಹೇಳಿಕೆ ಕೊಟ್ಟಿದ್ದರೆ, ಅಲ್ಲಿ ಆಗ ಹಾಜರಿದ್ದ ಸಿಗದಾಳು ಪ್ರಸಾದ್ (ಎಸ್. ಎ. ಶಿವಪ್ರಸಾದ್) ರನ್ನು 'ಮುಂಜಾವು' ಪ್ರಶ್ನಿಸಿದಾಗ "ಸ್ವಲ್ಪ ಸ್ವಂತದ ಅಕ್ಕಿಯಿತ್ತು, ಅಷ್ಟೆ" ಎಂಬ ಉತ್ತರ ಬಂತು

ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ನೀಡಿದ ಸುಳಿವಿನ ಮೇರೆಗೆ ಸುಮಾರು 125 ರಿಂದ 150 ಕ್ವಿಂಟಾಲ್‌ಗಳಷ್ಟು ಅಕ್ಕಿಯು ಸಂಗ್ರಹವಾಗಿದೆ ಎನ್ನಲಾಗಿದ್ದು, ಇನ್ನುಳಿದ ಅಕ್ಕಿಯೆಲ್ಲ ಯಾವಾಗ, ಎಲ್ಲಿಗೆ ರವಾನೆಯಾಯಿತೆಂಬುದು ಅಥವಾ ಎಲ್ಲಿ ಬಚ್ಚಿಡಲಾಗಿದೆಯೆಂಬುದು ಪತ್ತೆಯಾಗಿಲ್ಲ.

ಕುಟುಂಬ ಯೋಜನೆ ಲಾಟರಿ: ಕೊಪ್ಪಕ್ಕೆ 2 ಬಹುಮಾನ

ಕೊಪ್ಪ : ಕುಟುಂಬ ಕಲ್ಯಾಣ ಲಾಟರಿ ಯೋಜನೆಯಲ್ಲಿ ಜನವರಿ-ಫೆಬ್ರವರಿ ಡ್ರಾದಲ್ಲಿ ಮೊದಲ ಬಹುಮಾನ 3000 ರೂ. ಮೇಲುಬಿಳ್ರೆಯ ಶ್ರೀಮತಿ ಸಾವಿತ್ರಿ ಕೋಂ ಶಂಕರಪ್ಪ ಶೆಟ್ಟಿ ಎಂಬವರಿಗೂ, ಎರಡನೇ ಬಹುಮಾನ 1500 ರೂ ಕೊಪ್ಪ ನೇತಾಜಿ ನಗರದ ಶ್ರೀಮತಿ ಗಿರಿಜಾ ಕೋಂ ಆನಂದ ಶೆಟ್ಟಿ ಇವರಿಗೂ ಬಂದಿವೆ.

ಕಂದಾಯ ವಸೂಲಿ : ಸಹಕಾರಕ್ಕೆ ಮನವಿ

ಕೊಪ್ಪ : ಸರ್ಕಾರದ ವಿವಿಧ ಬಾಬುಗ[ಳ] ಕಂದಾಯ ಬಾಕಿ ವಸೂಲಾತಿಗಾಗಿ ತಹ[ಸೀ]ಲ್ದಾರರು ಕ್ರಮ ಕೈಗೊಂಡು ಈಗಾಗ[ಲೇ] ನೋಟೀಸು ಮುಂತಾದುವನ್ನು ನೀಡಿ ವಸ[ೂ]ಲಿಗೆ ಯತ್ನಿಸಿದ್ದಾಗ್ಯೂ ಬಾಕಿ ಉಳಿಸಿಕೊ[ಂ]ಡಿರುವ ಎಲ್ಲಾ ಬಾಕಿದಾರರಿಗೂ ... ವಾರಂಟ್‌ಗಳನ್ನು ಕಳಿಸಲಾಗಿದೆ. ತಾಲ್ಲೂಕಿನ ಎಲ್ಲೆಡೆ ಈ ರೀತಿ ಕ್ರಮ ಕೈಗೊ[ಳ್ಳಲಾಗಿ]ದ್ದು, ಸಾರ್ವಜನಿಕರು ಯಾವುದೇ ಅಹಿ[ತ]ಕರ ಘಟನೆಗಳಿಗೆ ಅವಕಾಶವಾಗದಂತೆ ಸ[ಹ]ಕರಿಸಿ ಕಂದಾಯದ ಬಾಕಿಗಳನ್ನು ಚುಕ[್ತಾ] ಮಾಡಬೇಕೆಂದು ತಹಸೀಲ್ದಾರ್ ಮನ[ವಿ] ಮಾಡಿದ್ದಾರೆ.

ಕೊಪ್ಪದಲ್ಲಿ ಮಕ್ಕಳಿಗೆ ಚಿತ್ರಕಲಾ ಶಿಬಿ[ರ]

ಕೊಪ್ಪ : 9ರಿಂದ 15 ವರ್ಷದೊಳಗಿನ ಮಕ್ಕಳಿಗಾಗಿ ಇಲ್ಲಿ ಏಪ್ರಿಲ್ ಮಧ್ಯ ಭಾಗದಲ್ಲಿ ತಾಲ್ಲೂಕಿನ ಚಿತ್ರಕಲಾ ಬಳಗದವರಿಂದ 1 ವಾರದ ಚಿತ್ರಕಲಾ ಶಿಬಿರ ಏರ್ಪಡಿಸಲಾಗುವುದು.

ಈ ಶಿಬಿರದಲ್ಲಿ ಚಿತ್ರಕಲೆಯ ಮೂಲ ಪಾಠಗಳ ಜೊತೆಗೆ, ವ್ಯಂಗ್ಯಚಿತ್ರ ಕಲೆ, ಮಣ್ಣಿನ ಮಾಡೆಲಿಂಗ್ ಹಾಗೂ ಕಾಷ್ಠ ಕಲೆ (ಕಟ್ಟಿಗೆ ಮತ್ತು ಬೇರುಗಳಿಂದ ಕಲಾಕೃತಿ ರಚನೆ)—ಇವುಗಳನ್ನೂ ಪರಿಚಯಿಸಲಾಗುವುದು. ಹೊರಾಂಗಣದಲ್ಲೂ ಪಾಠಗಳನ್ನು ನಡೆಸಲಾಗುವುದು.

ಪ್ರವೇಶ ಶುಲ್ಕ ರೂ 20-0[0] **ಮಾತ್ರ.** ಹೆಸರು, ವಿಳಾಸ, ತರಗ[ತಿ,] ವಯಸ್ಸು—ಈ ವಿವರಗಳೊಂದಿಗೆ ಪ್ರವೇ[ಶ]ಗಳನ್ನು ಕಳಿಸಲು ಕೊನೇ ದಿನ **15-4-1990.** ಹೆಚ್ಚಿನ ವಿವರಗಳಿ[ಗೆ] ಎಂ.ವಿ. ಶ್ರೀಕಾಂತ್, ಗುಣವಂತೆ ರಸ್[ತೆ,] ಕೊಪ್ಪ— ಇವರನ್ನು ಸಂಪರ್ಕಿಸಬಹುದು. ಶಿಬಿರದ ದಿನ ಮತ್ತು ಸ್ಥಳವನ್ನು ಮುಂ[ದೆ] ತಿಳಿಸಲಾಗುವುದು.

25 ಮಕ್ಕಳಿಗೆ ಮಾತ್ರ ಅವಕಾ[ಶ]ವಿದ್ದು, ಆಸಕ್ತರು ತ್ವರೆ ಮಾಡಿ.

ಕೊಪ್ಪದಲ್ಲಿ ಅಕ್ರಮ ಮದ್ಯ ವಶ

ಕೊಪ್ಪ : ಸುಮಾರು ಒಂದೂವರೆ ಲಕ್ಷ ರೂ. ಮಾರಾಟ ಬೆಲೆ ಇರುವ 196 ಪೆಟ್ಟಿಗೆ ಮದ್ಯವನ್ನು ಮಾ. 17 ರಂದು ಇಲ್ಲಿನ ಸುಭಾಷ್ ರಸ್ತೆಯಲ್ಲಿರುವ ದಿ| ಕೆ. ಎಲ್. ಮೂರ್ತಿರಾವ್ ಮತ್ತು ಕೀರ್ತಿನಾಥ್ ಮನೆಯ ಹಿಂದಿನ 'ಹಾಳು ಮನೆ'ಯಿಂದ ಜಿಲ್ಲಾ ಅಬಕಾರಿ ಅಧೀಕ್ಷಕರು ದಾಳಿ ನಡೆಸಿ ವಶಪಡಿಸಿಕೊಂಡಿದಾರೆ ಇವರಿಗೆ ಬಾಳೆಹೊನ್ನೂರಿನಲ್ಲಿ ಒಂದು ಮದ್ಯದಂಗಡಿ ಇದೆಯೆನ್ನಲಾಗಿದ್ದು, ಸ್ಥಳೀಯ ಲಕ್ಷ್ಮಿ ವೈನ್ಸ್ ಪಾಲುದಾರ ಚಂದ್ರ ಮೋಹನ್ ಅವರ ಸೋದರ ಬಂಧುವೂ ಆಗಿರುವುದು ಗಮನಾರ್ಹ. ಮೊಕದ್ದಮೆ ದಾಖಲಾಗಿ ಮುಂದಿನ ತನಿಖೆ ನಡೆಯುತ್ತಿದೆ.

18 ವರ್ಷದೊಳಗಿನವರ ನಿಗದಿ ಓವರ್ ಕ್ರಿಕೆಟ್

ಕೊಪ್ಪ : ನಾರ್ವೆಯ ಯಂಗ್ ಸ್ಟಾ[ರ್] ಕ್ರಿಕೆಟ್ ಕ್ಲಬ್ ಆಶ್ರಯದಲ್ಲಿ ತಾ|| ಮಟ್ಟ[ದ] '18 ವರ್ಷಕ್ಕೆ ಕೆಳ ಪಟ್ಟವರ ನಿಗದಿ ಓವರ್ ಕ್ರಿಕೆಟ್ ಟೂರ್ನಿ' ಏಪ್ರಿ[ಲ್] 14, 15 ರಂದು ನಡೆಯಲಿದ್ದು, ಆಸ[ಕ್ತ] ತಂಡಗಳು ಪಿ. ಸಾದಿಕ್, ನಾರ್ವೆ ಅಂ[ಚೆ] ಕೊಪ್ಪ ತಾ|| — ಇವರನ್ನು ಸಂಪರ್ಕ[ಿಸ]ಬಹುದು.

ಅಡಿಕೆ ಧಾರಣೆ

ಶಿವಮೊಗ್ಗ : 23-3-1990

ಸರಕು	3501-3930
ಚೆಟ್ಟಿ	2525-3029
ಗೊರಬಲು	1860-2021

ಎ. ಇ. ಒ.ರಿಂದ ಹಣ ದುರುಪಯೋಗ ?

(1ನೇ ಪುಟದಿಂದ)

ಅವರು ಹಾಗೆ ಹೇಳಿದ್ದು ನಿಜ. ಆದರೆ ಮುಂದೆ ಅದು ತೊಂದರೆಗೆ ಕಾರಣವಾದೀತು ದುರುಪಯೋಗವಲ್ಲವಾದರೂ ನಿಯಮದಂತೆ ಸರಿಯಲ್ಲವಾದ್ದರಿಂದ ಹಾಗೆ ಮಾಡಿ ತೊಂದರೆ ತಂದುಕೊಂಡೀರಿ ಎಂದು ತಾನು ಎಚ್ಚರಿಸಿದ್ದೆವೆನ್ನುತ್ತಾರೆ ಗೋವಿಂದಗೌಡರು

ಶಂಕೆಗಳು

ಆದರೂ ಕೆಲವು ಶಂಕೆಗಳು ಉಳಿಯುತ್ತವೆ ಈ ಹಣ ಬಂದ ವಿಚಾರ, ಅದರ ಬಗ್ಗೆ ತನ್ನ ಆಲೋಚನೆ ಇವನ್ನೆಲ್ಲ ಎಲ್ಲಾ ಮುಖ್ಯೋಪಾಧ್ಯಾಯರಿಗೂ ತಿಳಿಸಿ, ಅವರ ಸಹಮತವನ್ನೂ ಪಡೆಯುವುದಿರಲಿ, ಅವರಿಗೆ ವಿಷಯವನ್ನೇ ತಿಳಿಸಿರಲಿಲ್ಲವೇಕೆ? ಮಾರ್ಚ್ ಕೊನೆಯೊಳಗೇ ಓಚರ್ ಕೊಡಲೇ ಬೇಕಿದ್ದದರಿಂದ, ಗಿಡ ನೆಡುವುದು ಜೂನ್ ತಿಂಗಳಲ್ಲಾದರೂ ಬೇಲಿ ಸಲಕರಣೆಗಳ ಖರೀದಿ ಮುಂತಾದುವುಗಳಿಗೆ ಈ ಹಣ ವಿನಿಯೋಗಿಸಿ ಮಾರ್ಚ್ ಕೊನೆಯೊಳಗೆ ಹಣ ಖರ್ಚು ಮಾಡಲೇಬೇಕಿತ್ತು. ಹಾಗಿದ್ದೂ ಸಹ, ಮಾರ್ಚ್ ಕೊನೆ ಬಂದರೂ ಇನ್ನೂ ವಿತರಿಸಿಲ್ಲವೇಕೆ ? ಈ ಗುಲ್ಲು ಏಳದಿದ್ದರೆ ಇನ್ನ್ಯಾವಾಗ ವಿತರಿಸುತ್ತಿದ್ದರು ? ಅದಕ್ಕೆ ... ಹೇಗೆ ? ಕೊನೇ ಗಳಿಗೆಯಲ್ಲಿ ಓಚರ್ ... ಅರ್ಧಂಬರ್ಧ ಹಣ ಕೊಟ್ಟು ... ಬಳಿಗೆ ಹಾಕುವ ಯೋಚನೆ ... ವೆಂಬುದಕ್ಕೆ ಏನು ಖಾತರಿ ?

9 ಜನ ಮುಖ್ಯೋಪಾಧ್ಯಾಯರಿಂದ (ಬಾಳಗಡಿ ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ತನ್ನ ಪತ್ನಿಯೂ ಸೇರಿ) ಹಣ ಸಂದ ಓಚರ್ ಈ ಮೊದಲೇ ಪಡೆದಿರುವುದು ಸುಳ್ಳೆ ? ಸತ್ಯವಾದರೆ ಅದಕ್ಕೇನು ವಿವರಣೆ?

ಸತ್ಯ ಹೊರ ಬರಲಿ

ಇಂಥ ಕೆಲವು ಶಂಕೆಗಳು ಉಳಿಯುತ್ತವೆ ಆದರೆ ಹಲವಾರು ಜನ ಹಿರಿಯ ಅಧ್ಯಾಪಕರುಗಳು "ಎಲ್ಲಾ ಹಣ ತಿಂದು ಹಾಕುವುದು ಸಾಧ್ಯವೇ ಇಲ್ಲದ್ದು. ಅವರು ವಿವರಣೆ ನೀಡುವಂತೆ ಸದುದ್ದೇಶದಿಂದಲೂ ಸಾಧ್ಯ" ಎನ್ನುತ್ತಾರೆ. ಹೇಗೂ ಜಿ.ಪ. ಅಧ್ಯಕ್ಷರು ತನಿಖೆಗೆ ಆದೇಶಿಸಿರುವುದಾಗಿ ವರದಿಯಾಗಿದೆ. ಸತ್ಯ ಬೇಗನೆ ಹೊರಬೀಳಬಹುದು.

ಬೀಳ್ಕೊಡುಗೆ

ಹರಿಹರಪುರ : ಇಲ್ಲಿನ ರಾಷ್ಟ್ರೋತ್ಥಾನ ಬಳಗ ಈಚೆಗೆ ಏರ್ಪಡಿಸಿದ್ದ 'ಬೆಳದಿಂಗಳ ಭೋಜನದ' ಸಂದರ್ಭದಲ್ಲಿ ಈಚೆಗೆ ನಿವೃತ್ತರಾದ ಇಲ್ಲಿನ ವೈದ್ಯಾಧಿಕಾರಿ ಡಾ|| ಎನ್. ಪಿ. ತಿಮ್ಮಪ್ಪ ಅವರನ್ನು ಹಾರ್ದಿಕವಾಗಿ ಬೀಳ್ಕೊಡಲಾಯಿತು. ಸುಧಾಕರ್ ಅಧ್ಯಕ್ಷತೆ ವಹಿಸಿದ್ದು, ಭಾಸ್ಕರಾಚಾರ್ ಸ್ವಾಗತಿಸಿದರು. ಕೆ. ಜಿ. ಎನ್. ಶಾಸ್ತ್ರಿ ಮತ್ತು ಪಾರ್ಥವ ಟೈಲ್ಯಾರ್ ತಿಮ್ಮಪ್ಪನವರನ್ನು ಅಭಿನಂದಿಸಿ ಮಾತನಾಡಿದರು.

(ವರದಿ : ಕೆ ಎನ್. ಅನಿಲ್ ಕುಮಾರ್.)

...ುವುದು ಸಾಧ್ಯ; ಹಾಗೆ ಈ
...ರಿ ಮಾತ್ರ ಈ ರಸ್ತೆ ಉಳಿಯು
ಇಲ್ಲವಾದರೆ ಇಷ್ಟೊಂದು ಉಪ
...ವಾದ ರಸ್ತೆ ಎಲ್ಲಾ ಕಣ್ಣೆದುರೇ
...ಹೋಗುತ್ತದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ... ಕೊಪ್ಪ.